# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ

EDITOR: MAHESHWARI BHIMASHI BHARAMANNAVARA

BELAGAVI VARTE

KANNADA DAILY MORNING BELAGAVI

G-mail: belagavivarte1@gmail.com

epaper. belagavivarte.com

Regd No : G2/PMG/KA/NK/BM/157/26-28

Volume: 01 | Issue : 48 | MONDAY 27-04-2026 | PRGI No : KNKAN/26/A0962 | Pages:4 | Rs.2.00 | M: 9742418836


## ನ್ಯಾ. ನ್ಯಾ.ನಾಗಮೋಹನ್‌ದಾಸ್ ವರದಿ ಅವೈಜ್ಞಾನಿಕ ಎಂದು ತಿರಸ್ಕರಿಸಿದ್ದೀರಾ?: ಸರ್ಕಾರಕ್ಕೆ BJP ಪ್ರಶ್ನೆ

ಬೆಂಗಳೂರು: ನೀವೇ ನೇಮಿಸಿದ ನ್ಯಾ.ನಾಗಮೋಹನ್‌ದಾಸ್ ಅವರ ವರದಿ ಅವೈಜ್ಞಾನಿಕ ಎಂಬ ಕಾರಣಕ್ಕೆ ತಿರಸ್ಕರಿಸಿದ್ದೀರಾ ಎಂದು ಮಾಜಿ ಉಪ ಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ಪ್ರಶ್ನೆ ಮಾಡಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಆಂತರಿಕ ಮೀಸಲಾತಿ ಬಗ್ಗೆ ಅಧ್ಯಯನ ನಡೆಸಿ ಶಿಫಾರಸು ಸಲ್ಲಿಸಿದ್ದ ಈ ಆಯೋಗದ ವರದಿಯ ಬಗ್ಗೆ ಸರ್ಕಾರದ ನಿಲುವೇನು ಎಂದು ಪ್ರಶ್ನಿಸಿದರು.

ನ್ಯಾ.ನಾಗಮೋಹನ್‌ದಾಸ್ ಅವರ ವರದಿಯಲ್ಲಿ ಶೇ.17 ಎಂದಿದ್ದರೂ ಶೇ.15ಕ್ಕೆ ಸೀಮಿತ ಮಾಡಿ ಕೊಡಬಹುದಾಗಿತ್ತು. ಯಾಕೆ ಕೊಟ್ಟಿಲ್ಲ. ನಿನ್ನೆ ದಿನ ಬೆಟ್ಟ ಅಗೆದು ಇಲಿ ಹುಡುಕಿದಂತೆ ಸಿದ್ದರಾಮಯ್ಯ ಅವರು ಒಳ ಮೀಸಲಾತಿಯನ್ನು ಜಾರಿ ನಿರ್ಧಾರ ಪ್ರಕಟಿಸಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ ಎಂದು ಟೀಕಿಸಿದರು.

ಸಾಮಾಜಿಕ ನ್ಯಾಯ, ಸರ್ವರಿಗೂ ಸಮಪಾಲು, ಸಮಬಾಳು ಎಂದು ನಿರಂತರ ಭಾಷಣ ಮಾಡಿದ್ದೀರಲ್ಲವೇ? ಇದು ಕೇವಲ ಭಾಷಣದ ಸರಕೇ..?



ಸಿದ್ದರಾಮಯ್ಯ ಅವರೇ, ಅಹಿಂದ ವರ್ಗದ ಕುರಿತು ನಿಮಗೇನಾದರೂ ಬದ್ಧತೆ ಇದೆಯೇ? ಬದ್ಧತೆ ಇದ್ದರೆ ನೀವು ಸಾವಿರಾರು ಕೋಟಿ ಖರ್ಚು ಮಾಡಿ ವರದಿ ತರಿಸಿದ್ದೀರಿ. ಕೆಂಪರಾಜ್ ವರದಿ ಮೂಲೆಗುಂಪು ಮಾಡಿದ್ದೀರಿ. ಅದಾದ ಬಳಿಕ ಜಯಪ್ರಕಾಶ್ ಹೆಗ್ಡೆ ಅವರ ವರದಿ ಮೂಲೆಗುಂಪಾಗಿದೆ. ಮಧುಸೂದನ ನಾಯಕ್ ವರದಿ ಹೊರಗೆ ಬರಲೇ ಇಲ್ಲ ಎಂದು ಆರೋಪಿಸಿದರು.

ನಿಮಗೆ ಬದ್ಧತೆ ಎಲ್ಲಿದೆ? ಜನರಿಗೆ ಮೋಸ ಮಾಡಿ, ಬಡವರನ್ನು ದಾರಿ ತಪ್ಪಿಸಿ ಬಡವರಿಗೆ ಅಹಿಂದ ನಾಯಕ ಎಂದು ಹೇಳಿ ಅಧಿಕಾರಕ್ಕೆ ಬರುವುದೊಂದೇ ನಿಮ್ಮ ಗುರಿ. ಕುರ್ಚಿ ಉಳಿಸಿಕೊಳ್ಳಲು ನೀವು ಮಾಡುವುದನ್ನು ನೋಡಿದರೆ ಇದಕ್ಕಿಂತ ಹೆಚ್ಚಿನ ಮೋಸವನ್ನು ಪ್ರಪಂಚದಲ್ಲಿ ಬೇರೆ ಯಾರೂ ಮಾಡಲು ಸಾಧ್ಯ ಇಲ್ಲ ಎನಿಸುತ್ತಿದೆ, ಸಿದ್ದರಾಮಯ್ಯ ಅವರು ಮಹಾ ಮೋಸಗಾರ ಎಂದು ಟೀಕಿಸಿದರು.

ನಾವು ವೈಜ್ಞಾನಿಕವಾಗಿ ಶೇ.17ಕ್ಕೆ ಹೆಚ್ಚಿಸಿ ಮೀಸಲಾತಿ ಕೊಟ್ಟಿದ್ದೆವು. ಅಂದಿನ ಕಾನೂನು ಸಚಿವ ಮಾಧುಸ್ವಾಮಿ ಅವರ ವರದಿ ಪಡೆದು ವೈಜ್ಞಾನಿಕವಾಗಿ ಹಂಚಿದ್ದೆವು. ಎ– ಶೇ 6, ಬಿ– ಶೇ 5.5, 4.5, ಶೇ 1 ಅಲೆಮಾರಿಗಳಿಗೆ ಕೊಟ್ಟಿದ್ದೆವು. 2013ರ ಚುನಾವಣಾ ಪ್ರಣಾಳಿಕೆಯಲ್ಲಿ ಅಧಿಕಾರ ಸಿಕ್ಕಿದರೆ ಒಳ ಮೀಸಲಾತಿ ಜಾರಿ ಮಾಡುವುದಾಗಿ ಸಿದ್ದರಾಮಯ್ಯನವರು ಹೇಳಿದ್ದರು. ಬಳಿಕ ಸಿದ್ದರಾಮಯ್ಯನವರು ಬೀದಿಯಲ್ಲಿ ಜನರನ್ನು ಬಡಿದಾಡಲು ಬಿಟ್ಟು ಅವರು ಆನಂದವಾಗಿ ವಿಧಾನಸೌಧದಲ್ಲಿ ಕಾಲ ಕಳೆದಿದ್ದರು ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರು ಈಚೆಗೆ ಕೇವಲ ಹೊಂದಾಣಿಕೆಯ ರಾಜಕಾರಣಿ ಆಗಿದ್ದಾರೆಂದು ಅವರ ಸಂಪುಟದ ಸಚಿವ ಸತೀಶ್ ಜಾರಕಿಹೊಳಿ ಅವರೇ ಹೇಳಿದ್ದಾರೆ. ಅದು ಅಸತ್ಯವೇ ಸತ್ಯವೇ ಎಂದು ಮುಖ್ಯಮಂತ್ರಿಗಳೇ ಹೇಳಲಿ ಎಂದು ಒತ್ತಾಯಿಸಿದ ಅವರು, ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರು, ಸಿದ್ದರಾಮಯ್ಯ ಅವರಿಗೆ ಬದ್ಧತೆ ಇಲ್ಲ ಎನ್ನುತ್ತಿದ್ದಾರೆ ಎಂದರು.

ಸಿದ್ದರಾಮಯ್ಯನವರ ಸರಕಾರ ಯಾವುದೇ ಆಯೋಗಕ್ಕೆ ನೇಮಿಸಿದರೆ ದಯವಿಟ್ಟು ಒಪ್ಪಿಕೊಳ್ಳಬೇಡಿ. ನಿಮಗೆ ಅವಮಾನ ಮಾಡುವ ಕೆಲಸವನ್ನು ಸಿದ್ದರಾಮಯ್ಯನವರು ಮಾಡುತ್ತಾರೆ ಎಂದು ಮನವಿ ಮಾಡಿದರು.

ಮೀಸಲಾತಿ ವಿಷಯದಲ್ಲಿ ನಿನ್ನೆಯ ಅವರ ನಿರ್ಧಾರವನ್ನು ಯಾರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸದಾಶಿವಯ್ಯ ವರದಿ, ನಾಗಮೋಹನ್‌ದಾಸ್ ವರದಿ, ನಮ್ಮದೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಸಂಪುಟ ಉಪ ಸಮಿತಿ ವರದಿ ಇತ್ತು. ಸುಪ್ರೀಂ ಕೋರ್ಟ್ ಆದೇಶ ಇತ್ತು. ಯಾವುದನ್ನೂ ಪರಿಗಣಿಸದೇ ಖಾಜಿ ನ್ಯಾಯ ಮಾಡಿದ್ದಾರೆಂದು ಕಿಡಿಕಾರಿದರು.

## ಒಳ ಮೀಸಲಾತಿ ನಿರ್ಧಾರಕ್ಕೆ ಜನಮನ್ನಣೆ ಸಿಕ್ಕಿದ್ದು, ಇದು ಐತಿಹಾಸಿಕ ನಿರ್ಧಾರ: ಸಚಿವ ಸತೀಶ್ ಜಾರಕಿಹೊಳಿ



ಬೆಳಗಾವಿ: ರಾಜ್ಯ ಸರ್ಕಾರದ ಒಳ ಮೀಸಲಾತಿ ನಿರ್ಧಾರಕ್ಕೆ ಜನಮನ್ನಣೆ ದೊರಕುತ್ತಿದೆ ಎಂದು ಸಚಿವ ಸತೀಶ್ ಜಾರಕಿಹೊಳಿಯವರು ಶನಿವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ತೆಗೆದುಕೊಂಡ ಈ ನಿರ್ಧಾರವನ್ನು"ಐತಿಹಾಸಿಕ" ನಿರ್ಧಾರವಾಗಿದೆ ಎಂದು ಬಣ್ಣಿಸಿದ್ದಾರೆ.

ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನವನ್ನು ಏಕಮತದಿಂದ ಅಂಗೀಕರಿಸಲಾಗಿದೆ. ವಿವಿಧ ಸಮುದಾಯಗಳನ್ನು ಪ್ರತಿನಿಧಿಸುವ ಎಲ್ಲಾ ಸಚಿವರು ಸಭೆಯಲ್ಲಿ ಭಾಗವಹಿಸಿದ್ದು, ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ನಿರ್ಧಾರ ಕೈಗೊಳ್ಳಲಾಗಿದೆ. "ಎಲ್ಲ ವರ್ಗಗಳಲ್ಲೂ ತೃಪ್ತಿ ಮೂಡಿದೆ" ಎಂದು ಹೇಳಿದ್ದಾರೆ.

ಒಳ ಮೀಸಲಾತಿ ಬಹುಕಾಲದಿಂದ ಕೇಳಿಬರುತ್ತಿದ್ದ ಬೇಡಿಕೆಯಾಗಿದ್ದು, ಸಮುದಾಯಗಳ ಒಳಗೆ ಮೀಸಲಾತಿ ಪ್ರಯೋಜನಗಳನ್ನು ಸಮನಾಗಿ ಹಂಚಿಕೆ ಮಾಡಲು ಇದು ಮಹತ್ವದ ಹೆಜ್ಜೆಯಾಗಿದೆ. ಈ ನಿರ್ಧಾರವು ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ದೊಡ್ಡ ಬದಲಾವಣೆಯನ್ನು ತರಬಹುದೆಂಬ ನಿರೀಕ್ಷೆ ಇದೆ.

ಇದಕ್ಕೆ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ ವಿರುದ್ಧ ತಿರುಗೇಟು ನೀಡಿದ ಸತೀಶ್ ಜಾರಕಿಹೊಳಿಯವರು, "ವಿಪಕ್ಷಗಳು ಸರ್ಕಾರದ ಪ್ರತಿಯೊಂದು ನಿರ್ಧಾರದಲ್ಲೂ ತಪ್ಪು ಹುಡುಕುವುದು ಸಾಮಾನ್ಯ. ಇದು ಜನಪರ ಮತ್ತು ಐತಿಹಾಸಿಕ ಹೆಜ್ಜೆಯಾಗಿದ್ದು, ಸಾರ್ವಜನಿಕ ಬೆಂಬಲವೇ ಇದಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

## ಲಾಡ್ಜ್ ಮೇಲೆ ಪೊಲೀಸ್ ದಾಳಿ – ವೇಶ್ಯಾವಾಟಿಕೆ ಜಾಲ ಪತ್ತೆ, ಇಬ್ಬರ ಬಂಧನ



**ಬೆಳಗಾವಿ ವಾರ್ತೆ ಅಥಣಿ:** ತಾಲೂಕಿನ ಬಳ್ಳಿಗೇರಿ ಗ್ರಾಮದ ಹೊರವಲಯದಲ್ಲಿರುವ ಲಾಡ್ಜ್ ಒಂದರ ಮೇಲೆ ಅಥಣಿ ಪೊಲೀಸರು ಅನಿರೀಕ್ಷಿತ ದಾಳಿ ನಡೆಸಿ, ವೇಶ್ಯಾವಾಟಿಕೆ ದಂಧೆಯನ್ನು ಪತ್ತೆಹಚ್ಚಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಲಾಡ್ಜ್ ಮಾಲೀಕ ಸೇರಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಓರ್ವ ಮಹಿಳೆಯನ್ನು ರಕ್ಷಿಸಲಾಗಿದೆ.

ಬಳ್ಳಿಗೇರಿ ಗ್ರಾಮದ ವ್ಯಾಪ್ತಿಯಲ್ಲಿರುವ ಪ್ರಶಾಂತ ಹೋಟೆಲ್ ಮತ್ತು ಲಾಡ್ಜ್‌ನಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಿನಾಂಕ 24–04–2026ರಂದು ಅಥಣಿ ಪೊಲೀಸ್ ವೃತ್ತ ನಿರೀಕ್ಷಕರಾದ ಸಂತೋಷ್ ಡಿ. ಹಳ್ಳೂರ ಅವರ ನೇತೃತ್ವದ ತಂಡವು ಪಂಚರೊಂದಿಗೆ ಲಾಡ್ಜ್ ಮೇಲೆ ದಾಳಿ ನಡೆಸಿತು. ದಾಳಿಯ ವೇಳೆ ಒಬ್ಬ ಮಹಿಳೆಯನ್ನು ಈ ಜಾಲದಿಂದ ರಕ್ಷಿಸಲಾಗಿದ್ದು, ದಂಧೆ ನಡೆಸುತ್ತಿದ್ದ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ.

**ಬಂಧಿತ ಆರೋಪಿಗಳು:**ಸರದಾರ ಭಗವಂತ ಕಾಂಬಳೆ (ಲಾಡ್ಜ್ ಮಾಲೀಕ, ಸಾ॥ ಬಳ್ಳಿಗೇರಿ),ಪ್ರವೀಣ ಬಸವರಾಜ ಮಲ್ಲಾರಿ (ಸಾ॥ ಚಡಚಣ, ಹಾಲಿ ವಾಸ ಅಥಣಿ). ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಅಥಣಿ ವೃತ್ತ ನಿರೀಕ್ಷಕ ಸಂತೋಷ್ ಹಳ್ಳೂರ ಅವರೊಂದಿಗೆ ಪ್ರೊಬೇಷನರಿ ಪಿಎಸ್ಐ ಆರತಿ ತೇಲಿ, ಸಿಬ್ಬಂದಿಗಳಾದ ಬಿ.ಆರ್. ಪಾಟೀಲ, ಬಿ.ವೈ. ಮನ್ನಾಪೂರ, ಎಸ್.ಬಿ. ಖೋತ ಹಾಗೂ ಅಂಗನವಾಡಿ ಶಿಕ್ಷಕಿ ಮೀನಾಕ್ಷಿ ಹನಮಂತ ಮುಡಸಿ ಭಾಗವಹಿಸಿದ್ದರು.

ಈ ಕುರಿತು ಅಥಣಿ ಪೊಲೀಸ್ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪಿಎಸ್ಐ ಗಿರಿಮಲ್ಲಪ್ಪ ಉಪ್ಪಾರ ಅವರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಗಳ ವಿರುದ್ಧ ಅಥಣಿ ಠಾಣೆಯಲ್ಲಿ ಗುನ್ನಾ ನಂಬರ್ 323/2026 ರಂತೆ ಅಕ್ರಮ ಮಾನವ ಸಾಗಾಣಿಕೆ ತಡೆ ಕಾಯ್ದೆ (ITP Act 1956) ಅಡಿಯಲ್ಲಿ ಮೊಕದ್ದಮೆ ಹೂಡಲಾಗಿದ್ದು, ತನಿಖೆ ಮುಂದುವರಿದಿದೆ.

## ಶ್ರೀ ಶಿವಬೋಧರಂಗ ಸೊಸೈಟಿಗೆ 7.30ಕೋಟಿ ರೂ ಲಾಭ–ಪುಲಕೇಶ ಸೋನವಾಲಕರ

**ಬೆಳಗಾವಿ ವಾರ್ತೆ ಮೂಡಲಗಿ:** ಪಟ್ಟಣದ ಪ್ರತಿಷ್ಠಿತ ಶ್ರೀ ಶಿವಬೋಧರಂಗ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿಯು 2025–26ನೇ ಹಣಕಾಸಿನ ವರ್ಷದ ಅಂತ್ಯಕ್ಕೆ 7.30 ಕೊಟಿ ರೂ. ಲಾಭ ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಸೊಸೈಟಿ ಅಧ್ಯಕ್ಷ ಪುಲಕೇಶ ಸೋನವಾಲಕರ ಅವರು ತಿಳಿಸಿದರು.

ಅವರು ಶ್ರೀ ಶಿವಬೋಧರಂಗ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿಯ ಸಭಾ ಭವನದಲ್ಲಿ ಸೊಸೈಟಿಯ 2025–26 ನೇ ಸಾಲೀನ ವ್ಯವಹಾರದ ಕುರಿತು ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸೊಸೈಟಿಯು ಈಗಾಗಲೇ 18 ಶಾಖೆಗಳನ್ನು ಹೊಂದಿದ್ದು, ಶೀಘ್ರದಲ್ಲಿ ಇನ್ನೂ ನರಗುಂದ, ಬಬಲೇಶ್ವರ, ಬೀಳಗಿ, ಕುಳಗೇರಿ ಕ್ರಾಸ್, ಕೆರೂರ ಮತ್ತು ಸವದತ್ತಿಯಲ್ಲಿ ಶಾಖೆಗಳನ್ನು ಆರಂಭಿಸಲು ಸಹಾಕರ ಇಲಾಖೆಯಿಂದ ಅನುಮತಿ ದೊರೆತಿದ್ದು. 7 ಶಾಖೆಗಳನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವದು ಎಂದರು.

ಸದ್ಯಸೊಸೈಟಿಯು 17.568 ಒಟ್ಟು ಶೇರುದಾರರಿದ್ದು, 6.89ಕೋಟಿರೂ. ಶೇರು ಬಂಡವಾಳ, 35 ಕೋಟಿ ರೂ ನಿಧಿಗಳು, 476.00 ಕೋಟಿ ರೂ ಠೇವುಗಳು, 159.00 ಕೋಟಿ ರೂ ಗುಂತಾವಣಿಗಳನ್ನು ಹೊಂದಿದೆ. ವಿವಿಧ ಕ್ಷೇತ್ರಗಳಿಗೆ 267.00 ಕೋಟಿರೂ. ಸಾಲ ನೀಡಿದೆ, 543 ಕೋಟಿ ರೂ ದುಡಿಯುವ ಬಂಡವಾಳ ಮತ್ತು 1.906 ಕೋಟಿ ರೂ ವಾರ್ಷಿಕ ವ್ಯವಹಾರ ಮಾಡಿದೆಎಂದರು.

ಈ ಸಂದರ್ಭದಲ್ಲಿ ಸೊಸೈಟಿಯ




ಉಪಾಧ್ಯಕ್ಷ ಸುಭಾಸ ಸೋನವಾಲಕರ, ನಿರ್ದೇಶಕರಾದ ರವೀಂದ್ರ ಸೋನವಾಲಕರ, ಡಾ.ಶಂಕರ ದಂಡಪ್ಪನವರ, ಅಶೋಕ ಹೊಸೂರ, ರೇವಪ್ಪ ಕುರಬಗಟ್ಟಿ, ಶಿವಬಸು ಬೂದಿಹಾಳ, ಶಾರದಾಗುಲಗಾಜಂಬಗಿ, ವಿದ್ಯಾವತಿ ಸೋನವಾಲಕರ, ಮಂಜುಳಾ ಬಳಿಗಾರ, ಗಂಗವ್ವಾ ಸಣ್ಣಪ್ಪನವರ, ಹನುಮಂತ ಸಣ್ಣಕ್ಕಿ ಲೆಕ್ಕ ಪರಿಶೋಧಕ ಭೀಮಶಿ ಜರಳಿ ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕ ವೆಂಕಟೇಶ ಬಾಲರಡ್ಡಿ ಸ್ವಾಗತಿಸಿದರು. ಮಹೇಶ ಮಾಲಗಾರ ನಿರೂಪಿಸಿದರು. ಹನುಮಂತ ಕುಂಬಾರ ವಂದಿಸಿದರು.

## ಧಾರವಾಡ ಜಿಲ್ಲಾ ಬಾಲಭವನದಡಿ 5 ರಿಂದ 16 ವರ್ಷದೊಳಗಿನ ಮಕ್ಕಳಿಗೆ 15 ದಿನಗಳ ಬೇಸಿಗೆ ಶಿಬಿರಕ್ಕೆ ನೋಂದಣಿ ಪ್ರಾರಂಭ

**ಬೆಳಗಾವಿ ವಾರ್ತೆ ಧಾರವಾಡ:** ಧಾರವಾಡ ಜಿಲ್ಲಾ ಬಾಲಭವನದಡಿ 5 ರಿಂದ 16 ವರ್ಷದೊಳಗಿನ ಮಕ್ಕಳಿಗೆ 15 ದಿನಗಳ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಚಿತ್ರಕಲೆ, ಕರಕುಶಲ ಕಲೆ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಮೂಹ ಗೀತೆ, ಕಸದಿಂದ ರಸ, ಸ್ವಯಂ ರಕ್ಷಣೆಯ ಕಲೆಗಳು, ಕರಾಟೆ, ನಜಟಕ ಸೇರಿದಂತೆ ಮುಂತಾದ ಸೃಜನಾತ್ಮಕ ಚಟುವಟಿಕೆಗಳಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಶಿಬಿರಗಳನ್ನು ನಡೆಸ ಲಾಗುವುದು. ಬೇಸಿಗೆ ಶಿಬಿರವು ಬೆಳಿಗ್ಗೆ 9 ರಿಂದ ಮದ್ಯಾಹ್ನ 1 ಗಂಟೆಯವರೆಗೆ ಇರುತ್ತದೆ.

ಆಸಕ್ತ ಮಕ್ಕಳು ಏಪ್ರೀಲ್ 30, 2026 ರೊಳಗೆ ಜಿಲ್ಲಾ ಬಾಲಭವನ ಧಾರವಾಡದ ಕಛೇರಿಗೆ ಬಂದು ನೊಂದಾಯಿಸಿಕೊಳ್ಳಬೇಕು. (ವಿಶೇಷ ಸೂಚನೆ:– ಸರ್ಕಾರಿ ಶಾಲಾ ಮಕ್ಕಳು, ಗ್ರಾಮೀಣ ಪ್ರದೇಶದ ಹಾಗೂ ಸೌಲಭ್ಯ ವಂಚಿತ ಮಕ್ಕಳಿಗೆ, ಸರ್ಕಾರಿ ಸುಧಾರಣಾ ಸಂಸ್ಥೆಗಳ ಬಾಲಕರು, ಬಾಲಕಿಯರ ಬಾಲ ಮಂದಿರದ ಮಕ್ಕಳಿಗೆ, ವಿಕಲಚೇತನ ಮಕ್ಕಳಿಗೆ ಬೇಸಿಗೆ ಶಿಬಿರದಲ್ಲಿ ವಿಶೇಷ ಆದ್ಯತೆ ನೀಡಲಾಗುವುದು).

ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಛೇರಿಯ ದೂರವಾಣಿ ಸಂಖ್ಯೆ: 0836–2447850 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎ.29 ರಿಂದ ಮೇ.7 ರವರಿಗೆ ತೊಂಡಿಕಟ್ಟಿ ಗ್ರಾಮದೇವಿ ಜಾತ್ರಾ ಮಹೋತ್ಸವ ಮತ್ತು ವಿವಿಧ ಸ್ಪರ್ಧೆಗಳ ಆಯೋಜನೆ



**ಬೆಳಗಾವಿ ವಾರ್ತೆ ತೊಂಡಿಕಟ್ಟಿ:** ರಾಮದುರ್ಗ ತಾಲೂಕಿನ ಸುಕ್ಷೇತ್ರ ತೊಂಡಿಕಟ್ಟಿ ಗ್ರಾಮದಲ್ಲಿ 9 ವರ್ಷಕೊಮ್ಮೆ ನಡೆಯುವ ಗ್ರಾಮದೇವಿ ಜಾತ್ರಾ ಮಹೋತ್ಸವ ಏ.29 ರಿಂದ ಮೇ 7 ರವರಿಗೆ 9 ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರ ಮತ್ತು ಸ್ಪರ್ಧೆಗಳೊಂದಿಗೆ ಹಾಗೂ ಮಠಾಧೀಶರ ಸಾನ್ನಿಧ್ಯದಲ್ಲಿ ಜರುಗಲಿದೆ.

ಏ.29 ರಂದು ಪ್ರಾತಃ ಕಾಲದಲ್ಲಿ ಗಣಪತಿ ಪೂಜೆ ಪುಣ್ಯಹ ಪಂಚಗವ್ಯ ಬಿಂಬ ಶುದ್ಧಿ ತಾಯಿಗೆ ಬಿಂಬ ಶುದ್ಧಿ ಕಲಾವೃದ್ಧಿ ಹೋಮ, ವಸ್ತ್ರಾಭರಣ, ಆರತಿ ಮತ್ತು ಕುಂಭೋತ್ಸವ ಸಕಲ ವಾದ್ಯಮೇಳದೊಂದಿಗೆ ಗ್ರಾಮದಲ್ಲಿ ದೇವಿಯ ಮೆರವಣಿಗೆ ಜರುಗುವುದು. ಸಾಯಂಕಾಲ "ಚೌಡಕಿ ಪದ" ಜರುಗುವವು.

ಏ.30 ರಂದು ಮುಂಜಾನೆ ಶ್ರೀಗಳ ಸಮ್ಮುಖದಲ್ಲಿ ಎಚ್,ವಿ.ಪಾಟೀಲ ಕುಟುಂಬದಿಂದ ಹಾಗೂ ದೈವದ ವತಿಯಿಂದ ಗ್ರಾಮದೇವಿಗೆ ಉಡಿ ತುಂಬುವುದು. ಸಂಜೆ 6ಕ್ಕೆ ಹೊಸಕೋಟಿ ಸತ್ಯ ಸಾಯಿ ಸಮೀತಿಯಿಂದ ಸಾಯಿ ಭಜನಾ, ರಾತ್ರಿ 10 ಕ್ಕೆ ಶ್ರೀ ಕೃಷ್ಣ ಪಾರಿಜಾತ ನಾಟಕ ಜರುಗುವುದು.

ಮೇ. 1 ರಂದು ಮುಂಜಾನೆ ದೇವಿಗೆ ಹಾಗೂ ಗ್ರಾಮದ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ರಾತ್ರಿ 10ಕ್ಕೆ ಗಂಡು ಭೂಮಿಯಲ್ಲಿ ಪುಂಡ ಹುಲಿ ಸಾಮಾಜಿಕ ನಾಟಕ ಜರುಗುವುದು.

ಮೇ.2 ರಂದು ದೇವಿಗೆ ಉಡಿ ತುಂಬುವುದು. ರಾತ್ರಿ 7=30 ಕ್ಕೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಮತ್ತು ಜನಪ್ರತಿನಿದಿಗಳ ಉಪಸ್ಥಿತಿಯಲ್ಲಿ ಪ್ರವಚನ ಜರುಗುವುದು. ಮೇ.3 ರಂದು ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದ ಮತ್ತು ದೇವಿಯ ಹೊನ್ನಾಟ, .ರಾತ್ರಿ 7=30 ಕ್ಕೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಮತ್ತು ಜನಪ್ರತಿನಿದಿಗಳ ಉಪಸ್ಥಿತಿಯಲ್ಲಿ ಪ್ರವಚನ ಜರುಗುವುದು. ಮೇ.4 ರಂದು ದೇವಿಗೆ ಉಡಿ ತುಂಬುವುದು, ರಾತ್ರಿ 10=30 ರಸಮಂಜರಿ ಕಾರ್ಯಕ್ರಮ ಜರುಗುವುದು. ಮೇ.5 ರಂದು ಮುಂಜಾಣೆ ಲಕ್ಷ್ಮೀ ದೇವಿಗೆ ಶ್ರೀ ಸೂಕ್ತ ಹೋಮ ಹಾಗೂ ಗ್ರಾಮಸ್ಥರಿಂದ ಗ್ರಾಮದೇವಿಗೆ ಉಡಿ ತುಂಬುವುದು, ಸಂಜೆ 6ಕ್ಕೆ ಸಾಯಿ ಭಜನಾ ಮತ್ತು ರಾತ್ರಿ ಸಂಗ್ಯಾ ಬಾಳ್ಯಾ ನಾಟಕ ಜರುಗುವುದು. ಮೇ 6 ರಂದು ಶ್ರೀ ದುರ್ಗಾಪರಮೇಶ್ವರಿ ದೇವಿಗೆ ದುರ್ಗಾ ಹೋಮ ಹಾಗೂ ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದು, ರಾತ್ರಿ 10=30 ತಾಯಿಯ ಋಣ ಮಣ್ಣಿನ ಗುಣ ನಾಟಕ ಜರುಗುವುದು. ಮೇ.7 ರಂದು ಶ್ರೀ ಅರಳಿಮರದಮ್ಮ ದೇವಿಗೆ ನಾರಾಯಣಿ ಹೋಮ, ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದು ನಂತರ ಹೊನ್ನಾಟದೊಂದಿಗೆ ಗ್ರಾಮದಲ್ಲಿ ಗ್ರಾಮದೇವಿ ಮೆರವಣಿಗೆ , ಸಂಜೆ ದೇವಿಯು ಸಿಮಿಗೆ ಹೊಗುವಳು. ಮೇ.8 ರಂದು ಚಂಡಿಕಾ ಹೋಮ ನಂತರ ಗ್ರಾಮದೇವಿಯನ್ನು ಗದ್ದುಗೆಗೊಳಿಸುವ ಕಾರ್ಯಕ್ರಮ ಜರುಗುವುದು.

**ವಿವಿಧ ಸ್ಪರ್ಧೆಗಳು:** ತೊಂಡಿಕಟ್ಟಿ ಗ್ರಾಮದೇವಿ ಜಾತ್ರಾಮಹೋತ್ಸವ ನಿಮಿತ್ಯ ಏ.30 ರಂದು ಮುಂಜಾಣೆ 11 ಕ್ಕೆ ನಾಲ್ಕು ಗಾಲಿಯ ಟೇಲರ್ ಜಗ್ಗುವ ಸ್ಪರ್ಧೆ ಜರುಗುವುದು. ಮೇ.2 ರಂದು ಮುಂಜಾನೆ 10ಕ್ಕೆ ರಾಜ್ಯ ಮಟ್ಟದ ತೆರಬಂಡಿ ವೈಭವ ಸ್ಪರ್ಧೆ ಜರುಗುವುದು, ಮೇ 5 ರಂದು ಮುಂಜಾನೆ 10ಕ್ಕೆ ರಾಜ್ಯ ಮಟ್ಟದ ಟಗರಿನ ಕಾಳಗ ಸ್ಪರ್ಧೆ ಜರುಗುವುದು.

## ರಾಜ್ಯ ಪಿಡಿಓ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಾಧ್ಯಕ್ಷರಾಗಿ ಖುಬಾಸಿಂಗ್ ಜಾದವ ಆಯ್ಕೆ



**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ (ನೋ) ಬೆಂಗಳೂರು ಘಟಕದ 2026–29ನೇ ಸಾಲಿನ ಅವಧಿಗೆ ಕೇಂದ್ರ ಸಂಘದ ನೂತನ ಕಾರ್ಯಾಧ್ಯಕ್ಷರನ್ನಾಗಿ ಖುಬಾಸಿಂಗ್ ಜಾದವ ಅವರನ್ನು ನೇಮಕ ಮಾಡಲಾಗಿದೆ.

ಬೆಂಗಳೂರಿನ ಪಂಚಾಯತ್ ರಾಜ್ ಆಯುಕ್ತಾಲಯದ ಕಚೇರಿಯಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ದಿಲೀಪ್ ಕುಮಾರ್ ಬಿ.ಎಂ. ಅವರು ಖುಭಾಸಿಂಗ್ ಜಾದವ ಅವರಿಗೆ ಅಧಿಕೃತವಾಗಿ 'ನಾಮನಿರ್ದೇಶನ ಪ್ರಮಾಣ ಪತ್ರ'ವನ್ನು ಹಸ್ತಾಂತರಿಸುವ ಮೂಲಕ ಈ ಆಯ್ಕೆಯನ್ನು ಪ್ರಕಟಿಸಿದರು.

ಜವಾಬ್ದಾರಿ ನಿರ್ವಹಣೆಯ ಭರವಸೆ: ತಮ್ಮ ನೇಮಕಾತಿ ಕುರಿತು ಪ್ರತಿಕ್ರಿಯಿಸಿರುವ ಖುಭಾಸಿಂಗ್ ಜಾದವ ಅವರು, "ನನ್ನ ಮೇಲೆ ನಂಬಿಕೆ ಇಟ್ಟು ಈ ಉನ್ನತ ಜವಾಬ್ದಾರಿ ನೀಡಿದ ರಾಜ್ಯಾಧ್ಯಕ್ಷರಾದ ದಿಲೀಪ್ ಕುಮಾರ್ ಬಿ.ಎಂ. ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಸಂಘದ ಬೈಲಾ ನಿಯಮಗಳ ಚೌಕಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ, ಅಧಿಕಾರಿಗಳ ಹಿತರಕ್ಷಣೆ ಮತ್ತು ಸಂಘದ ಸಂಘಟನೆಗಾಗಿ ನಿಷ್ಠೆಯಿಂದ ಶ್ರಮಿಸುತ್ತೇನೆ" ಎಂದು ತಿಳಿಸಿದ್ದಾರೆ.

ಖುಬಾಸಿಂಗ್ ಜಾದವ ಅವರ ಈ ನೂತನ ಆಯ್ಕೆಗೆ ಮುದ್ದೇಬಿಹಾಳ ತಾಲ್ಲೂಕಿನ ವಿವಿಧ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗಣ್ಯರು ಹಾಗೂ ಸಂಘದ ಸದಸ್ಯರು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

## ಹೈಟೆಕ್ ಚಬನೂರ ಗ್ರಾಮವಾಗಲಿದೆ: ಶಾಸಕ ರಾಜುಗೌಡ

**ಬೆಳಗಾವಿ ವಾರ್ತೆ ತಾಳಿಕೋಟೆ:** ದೇವರ ಹಿಪ್ಪರಗಿ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಜನರ ಬೇಡಿಕೆಗನುಗುಣವಾಗಿ ಸರ್ಕಾರದಿಂದ ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರವೇ ಕಾರಣವಾಗಿದೆ ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ)ಹೇಳಿದರು.

ಶನಿವಾರ ಮತಕ್ಷೇತ್ರದ ಚಬನೂರ ಗ್ರಾಮದಲ್ಲಿ ಜಿ.ಪಂ.ವಿಜಯಪುರ, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ವಿಜಯಪುರ ಇದರ ಸನ್ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ಯೋಜನೆ ಅಡಿ ರೂ.10.55 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಅಂಗನವಾಡಿ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಚಬನೂರ ಗ್ರಾಮ ಇಡೀ ಮತ ಕ್ಷೇತ್ರದಲ್ಲಿಯೇ ಒಂದು ಹೈಟೆಕ್ ಮಾದರಿಯ ಗ್ರಾಮ ಆಗಲಿದೆ. ಈ ದೊಡ್ಡ ಮೊತ್ತದ ಅನುದಾನದಲ್ಲಿ ಸಿಸಿ ರಸ್ತೆ, ಚರಂಡಿ, ಹೈಟೆಕ್ ಶೌಚಾಲಯ, ಬಸ್ ನಿಲ್ದಾಣ ಹಾಗೂ ಹೈ ಮಾಸ್ಕ್ ವಿದ್ಯುತ್ ದೀಪಗಳು ಇರಲಿವೆ. ಎಲ್ಲಾ ಕಾಮಗಾರಿಗಳು ಗುಣಮಟ್ಟದಾಗಿರುವಂತೆ ನೋಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕ್ಷೇತ್ರದ ಅಭಿವೃದ್ಧಿಗೆ ಯಾರೇ ಪ್ರಯತ್ನ ಪಟ್ಟು ನನ್ನೊಂದಿಗೆ ಸಹಕರಿಸಿದರೆ ಅದನ್ನು ನಾನು ಸ್ವಾಗತಿಸುತ್ತೇನೆ ಅಭಿವೃದ್ಧಿ ವಿಷಯದಲ್ಲಿ ನನಗೆ ರಾಜಕಾರಣ ಬೇಕಾಗಿಲ್ಲ. ಚಬನೂರು ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಗ್ರಾಮವಾಗಿದೆ ಮುಂದೆಯೂ ನಿಮ್ಮ ಸಹಕಾರ ಇದೇ ರೀತಿಯಾಗಿರಲಿ, ನಿಮ್ಮ ಋಣ ತೀರಿಸುವ ಹಾಗೆ ನಾನು ಕೆಲಸ ಮಾಡುತ್ತೇನೆ ಎಂದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಚಬನೂರ ಶ್ರೀ ರಾಮಲಿಂಗೇಶ್ವರ ಮಠದ ಪೂಜ್ಯ ಶ್ರೀರಾಮಲಿಂಗಯ್ಯ ಮಹಾಸ್ವಾಮಿಗಳು ಗ್ರಾಮದ ಅಭಿವೃದ್ಧಿ ಕುರಿತು ಅಪಾರ ಕಾಳಜಿ ಹೊಂದಿರುವ ಮುಖಂಡ ರುದ್ರಗೌಡರು ಶಾಸಕ ರಾಜುಗೌಡರ ಸಹಕಾರದೊಂದಿಗೆ ಅನುದಾನ ತಂದು ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ. ಸಾಸನೂರ ಗ್ರಾ.ಪಂ. ಪಿಡಿಒ ಕಸನಕ್ಕಿ ಅವರು ಬಹಳ ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಇವರಿಗೆ ನಿಮ್ಮೆಲ್ಲರ ಸಹಕಾರ ಇರಲಿ, ಶ್ರೀ ಅಮೋಘಸಿದ್ಧ ಹಾಗೂ ಸಿದ್ಧಿ ಪುರುಷರ ಶ್ರೀ ರಾಮಲಿಂಗೇಶ್ವರರ ಆಶೀರ್ವಾದ ಸದಾ ತಮ್ಮೊಂದಿಗೆ ಇರಲಿದೆ ಎಂದರು.



"ನಾನು ಶಾಸಕನಾಗುವ ಮೊದಲು ಹೇಗೆ ಇದ್ದೆ ಈಗಲೂ ಕೂಡಾ ಹಾಗೆ ಇದ್ದೇನೆ ಜನರ ಮದ್ಯ ಬೆಳೆದು ಬಂದ ವ್ಯಕ್ತಿನಾನಾಗಿದ್ದು ನಿಮ್ಮೆಲ್ಲರ ಪ್ರೀತಿ ವಿಸ್ವಾಸದಿಂದ ನಿಮ್ಮೆಲ್ಲರ ಆಶೀರ್ವಾದದಿಂದ ನಿಮ್ಮ ಸೇವೆ ಮಾಡುವ ಭಾಗ್ಯ ಒದಗಿಸಿದ್ದರಿ ನಿಮ್ಮ ಪ್ರೀತಿ ವಿಸ್ವಾಸಕ್ಕೆ ನಾನು ಚೀರ್‍ಋಣಿಯಾಗಿದ್ದೇನೆ."

**ರಾಜುಗೌಡ ಪಾಟೀಲ**
**ಶಾಸಕರು ದೇ.ಹಿಪ್ಪರಗಿ ಮತಕ್ಷೇತ್ರ**

ಕಾರ್ಯಕ್ರಮದಲ್ಲಿ ತಾಪಂ ಇಒ ಅನಸೂಯಾ ಚಲವಾದಿ, ಎಇಇ ಆನಂದ ಸ್ವಾಮಿ, ವಿಲಾಸ್ ರಾಠೋಡ, ಮುಖಂಡರಾದ ರುದ್ರಗೌಡ ಪಾಟೀಲ, ಸಂಗನಗೌಡ ಪಾಟೀಲ, ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ, ಬಸವರಾಜ ಡೆಂಗಿ, ಮಲ್ಲನಗೌಡ ಬಿರಾದಾರ, ಸಿದ್ದು ಹಿರೇಕುರಬರ, ಯಮನೂರಿ ಒಡೆಯರ್, ಆದಿಲಶಾಹಿ ಕಡಕೋಳ, ತಿಪ್ಪಣ್ಣ ಹಿರೇಕುರಬರ, ರಾಮನಗೌಡ ಚೌದರಿ, ಸಿದ್ದು ಸಿಂಧನಕೇರಿ, ಸಿದ್ದರಾಯ ಹಿರೇಕುರಬರ, ಪ್ರಕಾಶ ಪಡಶೆಟ್ಟಿ, ಸಿದ್ದು ಅವಟಿ ಒಳಗೊಂಡು ಗ್ರಾಮದ ಮುಖಂಡರು ಮೊದಲಾದವರು ಉಪಸ್ಥಿತರಿದ್ದರು.

## ನಾರಿಶಕ್ತಿ ಅಭಿವಂದನ್ ಮಸೂದೆ ಅಂಗೀಕಾರಕ್ಕೆ ಪ್ರತಿಪಕ್ಷಗಳ ವಿರೋಧ: ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ

**ಬೆಳಗಾವಿ ವಾರ್ತೆ ವಿಜಯಪುರ:** ನಾರಿಶಕ್ತಿ ಅಭಿವಂದನ್ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಕಾಂಗ್ರೆಸ್ ಹಾಗೂ ಇನ್ನಿತರ ಪ್ರತಿಪಕ್ಷಗಳ ವಿರುದ್ಧ ವಿಜಯಪುರದಲ್ಲಿ ನಾರಿಶಕ್ತಿ ಅಭಿವಂದನ್ ಫೋರಂ ಪದಾಧಿಕಾರಿಗಳು ಪ್ರತಿಭಟನಾ ರ್‍ಯಾಲಿ ನಡೆಸಿದರು.

ವಿಜಯಪುರದ ಶ್ರೀ ಸಿದ್ದೇಶ್ವರ ದೇವಾಲಯದಿಂದ ಆರಂಭಗೊಂಡ ರ್‍ಯಾಲಿ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿತು.

ನಾರಿಶಕ್ತಿ – ದೇಶದ ಶಕ್ತಿ, ಮಹಿಳಾ ಸಬಲೀಕರಣ ವಿಷಯದಲ್ಲಿ ಬೇಡ ರಾಜಕಾರಣ ಎಂಬಿತ್ಯಾದಿ ಘೋಷಣೆಗಳ ನ್ನು ಕೂಗುತ್ತಾ ನಾರಿಶಕ್ತಿ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಪ್ರತಿಪಕ್ಷಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಅಸಮಾಧಾನ ಹೊರಹಾಕಿದರು.

ಫೋರಂನ ಪ್ರಮುಖರಾದ ಡಾ. ವಿಜಯಲಕ್ಷ್ಮಿ ತುಂಗಳ ಮಾತನಾಡಿ, ಪ್ರತಿಪಕ್ಷಗಳು ನಾರಿಶಕ್ತಿ ಅಭಿವಂದನ್ ಮಸೂದೆ ಜಾರಿಯಾಗದಂತೆ ನೋಡಿಕೊಂಡು ಸಮಸ್ತ ಸ್ತ್ರೀ ಕುಲಕ್ಕೆ ಅವಮಾನ ಮಾಡಿವೆ. ಮಹಿಳಾ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಶಯ ಪೂರ್ಣವಾಗಿ ಜಾರಿಗೆ ತರಲು ಉದ್ದೇಶಿಸಿದ ಈ ಕಾಯ್ದೆಗೆ ಬೆಂಬಲ ನೀಡದೇ ಪ್ರತಿಪಕ್ಷಗಳು ಮಹಿಳಾ ವಿರೋಧಿ ನೀತಿ ಅನುಸರಿಸಿವೆ. ಶಾಸನ ಸಭೆಗಳಲ್ಲಿ ಶೇ.33 ರಷ್ಟು ಮೀಸಲಾತಿ ನೀಡುವ ಈ ಮಸೂದೆ ಮಹಿಳಾ



ಆಡಳಿತ ಸಹಭಾಗಿತ್ವಕ್ಕೆ ಹೊಸ ಭಾಷ್ಯ ಬರೆಯುತ್ತಿತ್ತು. ಇದನ್ನು ಸಹಿಸದ ಪ್ರತಿಪಕ್ಷಗಳು ಈ ಕಾಯ್ದೆ ವಿರೋಧಿಸಿವೆ ಎಂದು ಅಸಮಾಧಾನ ಹೊರಹಾಕಿದರು.

ನಾರಿ ಶಕ್ತಿ ವಂದನಾ ಕಾಯ್ದೆಗೆ ಸೋಲುಂಟಾಗಿರುವುದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಉದ್ದೇಶವನ್ನು ಕರಾಳ ದಿನವಾಗಿಸಿದೆ. ಅಣ್ಣ ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹದಾಶಯಗಳಿಗೆ ಕಾಂಗ್ರೆಸ್ ದ್ರೋಹ ಮಾಡಿದಂತಾಗಿದೆ. ಬಿಜೆಪಿ ಅನೇಕ ಮಹಿಳಾ ಮುಖ್ಯಮಂತ್ರಿಗಳನ್ನು ಮಾಡಿದೆ. ಕಾಂಗ್ರೆಸ್ ಪಕ್ಷ ತನ್ನ ಮಹಿಳಾ ವಿರೋಧಿ ನೀತಿ ಮುಂದುವರೆಸುತ್ತಲೇ ಇದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಿದಾಗಲೂ ವಿರೋಧ,ಸಿಎಎ ಅನುಷ್ಠಾನಕ್ಕೂ ವಿರೋಧವಿತ್ತು. ತ್ರಿವಳಿ ತಲಾಖ್ ರದ್ದನ್ನೂ ವಿರೋಧಿಸಿದ್ದರು. ಜಿಎಸ್‌ಟಿ ಜಾರಿಗೂ ವಿರೋಧ ಮಾಡಿದರು ಎಂದರು.

ಆಯುಷ್ಮಾನ್ ಭಾರತ್ ಅನುಷ್ಠಾನಕ್ಕೆ ವಿರೋಧ, ಹೊಸ ಸಂಸತ್ತಿನ ಭವನ ನಿರ್ಮಾಣಕ್ಕೂ ವಿರೋಧ, ನಕ್ಸಲ್‌ವಾದ ಅಂತ್ಯ ಹಾಕಿದ್ದಕ್ಕೂ ವಿರೋಧ ಇವರದಾಗಿತ್ತು. ದೇಶ ರಕ್ಷಣೆಗಾಗಿ ಸರ್ಜಿಕಲ್ ಸ್ಟ್ರೈಕ್ , ಏರ್ ಸ್ಟ್ರೈಕ್, ಆಪರೇಷನ್ ಸಿಂಧೂರ ಮಾಡಿದರೆ ಅದಕ್ಕೂ ವಿರೋಧ ಎಂದರೆ ಹೇಗೆ ಎಂದು ಖಾರವಾಗಿ ಪ್ರಶ್ನಿಸಿದರು.

ಕಾಂಗ್ರೆಸ್‌ನ ಸ್ತ್ರೀ ಕುಲದ ಬಗೆಗಿನ ಕಳಕಳಿ ಕೇವಲ ಮೊಸಳೆ ಕಣ್ಣೀರು ಎಂಬುದು ಸಾಬೀತಾಗಿದೆ. ಜನಸಂಖ್ಯೆ ಆಧಾರದಲ್ಲಿ ಜನಪ್ರತಿನಿಧಿಗಳ ಹೆಚ್ಚಳದಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಆಗುವುದಿಲ್ಲ. ಇದು ಕೇವಲ ಸುಳ್ಳು ಸುದ್ದಿ ಅಷ್ಟೇ. ಕಾಂಗ್ರೆಸ್ ಪಕ್ಷ ಇನ್ನಾದರೂ ಕುಟೀಲ ನೀತಿ ಬಿಟ್ಟು ಸಮಸ್ತ ಮಹಿಳಾ ಕುಲದ ಕ್ಷಮೆಯಾಚಿಸಿ ಕಾಯ್ದೆಗೆ ಬೆಂಬಲಿಸಬೇಕು ಎಂದು ಒತ್ತಾಯಿಸಿದರು.

ಪ್ರಮುಖರಾದ ಉಪ ಮಹಾಪೌರರಾದ ಸುಮಿತ್ರ ಜಾದವ್ ಮಲ್ಲಮ್ಮ, ಜೋಗೂರ, ಭಾರತಿ ಬಯಾರ್, ಪ್ರಭಾವತಿ ಪಾಟೀಲ, ಗೀತಾ, ಸುನೀತಾ ಒಡೆಯರ, ಡಾ.ಮಹಾನಂದಾ, ಅನ್ನಪೂರ್ಣ ರಾಠೋಡ, ವಿಜಯಲಕ್ಷ್ಮಿ, ಸುಮಿತ್ರಾ, ಶೀಲಾ ಕಾಕಡೆ, ಲಾಲು ಬಾಯಿ, ಮನಕಾಬಾಯಿ, ಬಕುಬಾಯಿ, ಶಾಂತಾ, ಭಾರತಿ ಶಿವಣಗಿ, ನಂದಾ, ಪ್ರಿಯಾಂಕಾ ಪಾಲ್ಗೊಂಡಿದ್ದರು.

## ಶ್ರೀ ಯಲ್ಲಾಲಿಂಗ ದೇವಸ್ಥಾನಕ್ಕೆ ಸಮುದಾಯದ ಭವನಕ್ಕೆ ಶಾಸಕ ನಾಡಗೌಡರಿಂದ ಭೂಮಿ ಪೂಜೆ: ಮಠಗಳಿಗೆ ದಾನ ನೀಡದ ಗುತ್ತಿಗೆದಾರರ ವಿರುದ್ಧ ಶಾಸಕರ ಅಸಮಾಧಾನ



**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ಪಟ್ಟಣದ ಮಾರುತಿ ನಗರದ ಶ್ರೀ ಯಲ್ಲಾಲಿಂಗ ದೇವಸ್ಥಾನಕ್ಕೆ ಸಮುದಾಯ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 25 ಲಕ್ಷ ರೂ. ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಮತ್ತೆ 25 ಲಕ್ಷ ರೂ. ಅನುದಾನ ಒದಗಿಸುವ ಭರವಸೆ ನೀಡುತ್ತೇನೆ ಎಂದು ಕೆಎಲ್‌ಡಿಎಲ್ ನಿಗಮದ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್. ನಾಡಗೌಡ ಹೇಳಿದರು.

ಪಟ್ಟಣದ ಮಾರುತಿ ನಗರದಲ್ಲಿರುವ ಮುಗಳಗೋಡ ಶ್ರೀ ಯಲ್ಲಾಲಿಂಗ ಮಠಕ್ಕೆ ಸಮುದಾಯ ಭವನದ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಧರ್ಮದ ಕೆಲಸಗಳಲ್ಲಿ ದಾನ ನೀಡುವುದು ನಿಜವಾದ ಮನುಷ್ಯತ್ವ. ಆದರೆ ಇಂದು ಗುತ್ತಿಗೆದಾರರು ರಾಜಕಾರಣಿಗಳಿಗೆ ಕಾಣಿಕೆ ನೀಡುತ್ತಾರೆ, ರಾಜಕಾರಣಕ್ಕೆ ಹಣ ಸುರಿಯುತ್ತಾರೆ. ಆದರೆ ಮಠ–ಮಾನ್ಯಗಳಿಗೆ ದಾನ ನೀಡಲು ಗುತ್ತಿಗೆದಾರರು ಮುಂದೆ ಬರುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಹಾಯ ಮಾಡಿ ಡಂಗೂರ ಒಡೆಯುವವರ ಮಧ್ಯೆ, ಮುಗಳಗೋಡ ಮಠದ ಆಶೀರ್ವಾದದಿಂದ ನಾನು ಇಂದು ಉನ್ನತ ಹುದ್ದೆಗೆ ಏರಿದ್ದೇನೆ. ಈ ಮಠಕ್ಕೆ ಶಕ್ತಿಯಿದೆ, ಭಕ್ತರಿಗೆ ಅನುಕೂಲವಾಗುವಂತೆ ಮಠ ಬೆಳೆಯಬೇಕು" ಎಂದರು.

ಈ ವೇಳೆ ಎಪಿಎಂಸಿ ಮಾಜಿ ಉಪಾಧ್ಯಕ್ಷ ವೈ.ಎಚ್. ವಿಜಯಕರ ಮಾತನಾಡಿ, ಇಂದಿನ ಕಾಲದಲ್ಲಿ ಮಕ್ಕಳು ಮೊಬೈಲ್ ಸಂಸ್ಕೃತಿಗೆ ದಾಸರಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಠ–ಮಾನ್ಯಗಳು ಮಕ್ಕಳಲ್ಲಿ ಭಕ್ತಿ ಮತ್ತು ಸಂಸ್ಕಾರದ ಭಾವನೆ ಮೂಡಿಸಿ ಮೊಬೈಲ್‌ನಿಂದ ಮುಕ್ತಿ ನೀಡುತ್ತವೆ. ನಾಡಗೌಡರು ಮಠದ ಮೇಲೆ ಅಪಾರ ಭಕ್ತಿ ಹೊಂದಿದ್ದು, ಮುಂದಿನ ದಿನಗಳಲ್ಲಿ ಅವರು ಇನ್ನೂ ಉನ್ನತ ಹುದ್ದೆ ಅಲಂಕರಿಸಲಿದ್ದಾರೆ" ಎಂದು ಆಶಿಸಿದರು.

ಸಿದ್ದನಕೊಳ್ಳದ ಶಿವಕುಮಾರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಠದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಈ ಸಮಾರಂಭದಲ್ಲಿ ಗೋವಾ ಕನ್ನಡಿಗರ ಸಂಘದ ರಾಜ್ಯಾಧ್ಯಕ್ಷ ಸಿದ್ದಣ್ಣ ಮೇಟಿ, ಪುರಸಭೆ ಮಾಜಿ ಅಧ್ಯಕ್ಷ ಮೈಹಿಬೂಬು ಗೊಳಸಂಗಿ, ಕಸಾಪ ತಾಲ್ಲೂಕು ಅಧ್ಯಕ್ಷ ಕಾಮರಾಜ ಬಿರಾದಾರ, ಸದಾಶಿವ ಮಾಗಿ, ಸದು ಮಠ, ಕಮಿಟಿ ಅಧ್ಯಕ್ಷ ಎಸ್.ಎಸ್. ಹುನಗುಂದ, ಎಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ, ರಫೀಕ್ ಶಿರೋಳ, ಬಸವರಾಜ ನಾಯ್ಕೋಡಿ, ವಾಸ್ತವ ಚಿತ್ತರಗಿ, ಹುಸೇನ್ ಮುಲ್ಲಾ, ಲ್ಯಾಂಡ್ ಆರ್ಮಿ ಇಂಜಿನಿಯರ್ ನಾಗರಾಜ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಎಸ್ಸೆಸ್ಸೆಲ್ಸಿ ಪರೀಕ್ಷೆ: 625ಕ್ಕೆ 625 ಅಂಕ; ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ನಾಗರಬೆಟ್ಟದ ಆಕ್ಸ್‌ಫರ್ಡ್ ಪಾಟೀಲ ಶಾಲೆಯ ವಿದ್ಯಾರ್ಥಿನಿ

**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ತಾಲ್ಲೂಕಿನ ನಾಗರಬೆಟ್ಟದ ಗುಡ್ಡದ ಮೇಲಿರುವ ಪ್ರತಿಷ್ಠಿತ ಆಕ್ಸ್‌ಫರ್ಡ್ ಪಾಟೀಲ್ಸ್ ಇಂಗ್ಲಿಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಸೌಜನ್ಯ ಬಸವರಾಜ ಕಂದಕೂರ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಐತಿಹಾಸಿಕ ಸಾಧನೆ ಮಾಡಿದ್ದಾಳೆ.

**ನೂರಕ್ಕೆ ನೂರು ಫಲಿತಾಂಶದ ಸಂಭ್ರಮ:** ಸೌಜನ್ಯ ಕೇವಲ ವೈಯಕ್ತಿಕ ಸಾಧನೆಯನ್ನಷ್ಟೇ ಮಾಡದೆ, ತನ್ನ ಶಾಲೆಯ ಕೀರ್ತಿಯನ್ನೂ ಮುಗಿಲೆತ್ತರಕ್ಕೆ ಏರಿಸಿದ್ದಾಳೆ. ವಿಶೇಷವೆಂದರೆ, ಈ ಬಾರಿ ಈ ಶಾಲೆಯು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು (100%) ಫಲಿತಾಂಶ ದಾಖಲಿಸಿ ಸಂಭ್ರಮಿಸಿದೆ. ಗ್ರಾಮೀಣ ಭಾಗದ ಶಾಲೆಯೊಂದರ ವಿದ್ಯಾರ್ಥಿನಿ ಇಡೀ ರಾಜ್ಯಕ್ಕೇ ಮಾದರಿಯಾಗಿ ಹೊರಹೊಮ್ಮಿರುವುದು ಪಾಲಕರಲ್ಲಿ, ಶಿಕ್ಷಕರಲ್ಲಿ ಮತ್ತು ತಾಲ್ಲೂಕಿನ ಜನತೆಯಲ್ಲಿ ಅಪಾರ ಹರ್ಷ ತಂದಿದೆ.

**ಸಂಸ್ಥೆಯಿಂದ ಅಭಿನಂದನೆ:** ವಿದ್ಯಾರ್ಥಿನಿಯ ಈ ಅಭೂತಪೂರ್ವ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಎಂ.ಎಸ್. ಪಾಟೀಲ, ಆಡಳಿತಾಧಿಕಾರಿ ಅಮೀತಗೌಡ ಪಾಟೀಲ, ಶಾಲೆಯ ಮುಖ್ಯಗುರುಗಳಾದ ಇಸ್ಮಾಯಿಲ್ ಮನಿಯಾರ ಹಾಗೂ ಶಾಲೆಯ ಸಮಸ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾರ್ದಿಕವಾಗಿ ಅಭಿನಂದನೆ ಸಲ್ಲಿಸಿದ್ದಾರೆ. ಸೌಜನ್ಯಾಳ ನಿರಂತರ ಪರಿಶ್ರಮ ಮತ್ತು ಶಿಕ್ಷಕರ ಸರಿಯಾದ ಮಾರ್ಗದರ್ಶನವೇ ಈ ಯಶಸ್ಸಿಗೆ ಪ್ರಮುಖ ಕಾರಣ ಎಂದು ಸಂಸ್ಥೆಯ ಪದಾಧಿಕಾರಿಗಳು ಶ್ಲಾಘಿಸಿದ್ದಾರೆ.



"ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಮತ್ತು ಅವಕಾಶ ಸಿಕ್ಕರೆ ಅವರು ರಾಜ್ಯ ಮಟ್ಟದಲ್ಲಿ ಮಿಂಚಬಲ್ಲರು ಎಂಬುದಕ್ಕೆ ಸೌಜನ್ಯಾ ಕಂದಕೂರ ಸಾಕ್ಷಿಯಾಗಿದ್ದಾಳೆ. ಅವಳ ಈ ಐತಿಹಾಸಿಕ ಸಾಧನೆ ನಮ್ಮ ಆಕ್ಸ್‌ಫರ್ಡ್ ಸಂಸ್ಥೆಗೆ ಮತ್ತು ತಾಲ್ಲೂಕಿಗೆ ದೊಡ್ಡ ಹೆಮ್ಮೆ ತಂದಿದೆ."

**ಎಂ.ಎಸ್. ಪಾಟೀಲ, ಅಧ್ಯಕ್ಷರು,**
**ಆಕ್ಸ್‌ಫರ್ಡ್ ಸಂಸ್ಥೆ.**

## ಎಸ್ಸೆಸ್ಸೆಲ್ಸಿಯಲ್ಲಿ ವಿದ್ಯಾರ್ಥಿನಿ ನೀಲಮ್ಮ 603 ಅಂಕ ಪಡೆದು ಊರಿಗೆ ಕೀರ್ತಿ ತಂದ ನೀಲಮ್ಮ ಚಾಲಕನ ಮಗಳ ಶೈಕ್ಷಣಿಕ ಸಾಧನೆ: 625ಕ್ಕೆ 603 ಅಂಕ ಗಳಿಸಿದ ನೀಲಮ್ಮ ಪಾಟೀಲಗೆ ಗೌರವ

**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ತಾಲೂಕಿನ ಚವನಭಾವಿ ಗ್ರಾಮದ ಬಿಎಂಟಿಸಿ ಚಾಲಕನ ಮಗಳೊಬ್ಬಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ಗ್ರಾಮ ಮತ್ತು ಪೋಷಕರಿಗೆ ಕೀರ್ತಿ ತಂದಿದ್ದಾಳೆ.

ಬೆಂಗಳೂರಿನ ಶ್ರೀ ಶಾರದಾ ವಿದ್ಯಾಮಂದಿರ ಶಾಲೆಯ ವಿದ್ಯಾರ್ಥಿನಿಯಾದ ನೀಲಮ್ಮ ಬಸನಗೌಡ ಪಾಟೀಲ, ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 603 ಅಂಕಗಳನ್ನು (ಶೇ. 96.48) ಪಡೆಯುವ ಮೂಲಕ ಶಾಲೆಯ ಟಾಪರ್ ಆಗಿ ಹೊರಹೊಮ್ಮಿದ್ದಾಳೆ. ತಾಲೂಕಿನ ಚವನಭಾವಿ ಗ್ರಾಮದ ನಿವಾಸಿ ಹಾಗೂ ಬೆಂಗಳೂರಿನಲ್ಲಿ ಬಿಎಂಟಿಸಿ ಚಾಲಕರಾಗಿ ಕೆಲಸ ನಿರ್ವಹಿಸುತ್ತಿರುವ ಬಸನಗೌಡ ಪಾಟೀಲ ಅವರ ಪುತ್ರಿಯಾದ ನೀಲಮ್ಮಳ ಈ ಸಾಧನೆಗೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಗ್ರಾಮಕ್ಕೆ ಆಗಮಿಸಿದ ಸಾಧಕ ವಿದ್ಯಾರ್ಥಿನಿ ನೀಲಮ್ಮ ಇವಳಿಗೆ ಗ್ರಾಮಸ್ಥರು ಹಾಗೂ ಮುಖಂಡರು ಸಿಹಿ ತಿನಿಸಿ, ಹಾರ ಹಾಕಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಗಂಗಪ್ಪ ನಾಲತವಾಡ, ಯಲ್ಲಪ್ಪ ಕಾರಕೂರ, ತಿಪ್ಪಣ್ಣ ನಾಲತವಾಡ, ಗದ್ದಪ್ಪ ಪೂಜಾರಿ, ಲಕ್ಷ್ಮಣ



ಗುರಿಕಾರ, ಬಸಪ್ಪ ನಾಲತವಾಡ, ನೀಲಪ್ಪ ಪಾಟೀಲ,ಶರಣಪ್ಪ ಪಾಟೀಲ,ಶಿಕ್ಷಕ ಜುಮಣ್ಣ ಸೋಮನಾಳ, ಸೇರಿದಂತೆ ಊರಿನ ಪ್ರಮುಖರು ಮತ್ತು ಯುವಕರು ಉಪಸ್ಥಿತರಿದ್ದು, ವಿದ್ಯಾರ್ಥಿನಿಯ ಮುಂದಿನ ವಿದ್ಯಾಭ್ಯಾಸಕ್ಕೆ ಶುಭ ಕೋರಿದರು.

## ಹಾಕಿ, ಸೈಕ್ಲಿಂಗ್, ಕುಸ್ತಿ ಉಚಿತ ತರಬೇತಿ ಶಿಬಿರ

**ಬೆಳಗಾವಿ ವಾರ್ತೆ ಬಾಗಲಕೋಟೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನವನಗರದಲ್ಲಿರುವ ಜಿಲ್ಲಾ ಕ್ರೀಡಾಂಗಣ ಹಾಗೂ ಮುಧೋಳ ನಗರದಲ್ಲಿರುವ ಕವಿ ಚಕ್ರವರ್ತಿ ರನ್ನ ತಾಲೂಕಾ ಕ್ರೀಡಾಂಗಣದಲ್ಲಿ ಉಚಿತ ಬೇಸಿಗೆ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತ ಕ್ರೀಡಾಪಟುಗಳು ಸಂಬಂಧಪಟ್ಟ ತರಬೇತುದಾರರಲ್ಲಿ ಹೆಸರನ್ನು ನೋಂದಾಯಿಸಿಕೊಂಡು ಬೇಸಿಗೆ ತರಬೇತಿ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ.

ಎಪ್ರೀಲ್ 22 ರಿಂದ ಮೇ 30 ವರೆಗೆ ಹಾಕಿ ಕ್ರೀಡೆ ತರಬೇತಿಗೆ ತರಬೇತುದಾರ ಶರಣ ನಾವಲಗಿ (8762345086) ಎಪ್ರೀಲ್ 22 ರಿಂದ ಮೇ 12 ವರೆಗೆ ಸೈಕ್ಲಿಂಗ್ ತರಬೇತಿಗೆ ತರಬೇತುದಾರ ಶ್ರೀಶೈಲ ಲಾಯನ್ನವರ (9480210536) ಸಂಪರ್ಕಿಸಬಹುದಾಗಿದೆ.

ತರಬೇತಿಗಳು ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿದೆ. ಮುಧೋಳ ಕವಿ ಚಕ್ರವರ್ತಿ ರನ್ನ ಕ್ರೀಡಾಂಗಣದಲ್ಲಿ ಎಪ್ರೀಲ್ 22 ರಿಂದ ಮೇ 12 ವರೆಗೆ ಕುಸ್ತಿ ತರಬೇತಿ ನಡೆಯಲಿದ್ದು, ತರಬೇತಿದಾರ ಅರುಣ ಕುಮಕಾಲೆ (9740268539) ಇವರಲ್ಲಿ ನೋಂದಾಯಿಸಬೇಕು ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–235896ಗೆ ಸಂಪರ್ಕಿಸಬಹುದಾಗಿದೆ.

# ಜೈಲಿನಿಂದಲೇ ವಿನಯ್ ಕುಲಕರ್ಣಿ 'ಬಿಗ್ ಗೇಮ್': ಶಾಸಕ ಸ್ಥಾನ ಉಳಿಸಿಕೊಳ್ಳಲು ಕಾಂಗ್ರೆಸ್ ನಾಯಕನ ಮಾಸ್ಟರ್ ಪ್ಲಾನ್!





**ಬೆಳಗಾವಿ ವಾರ್ತೆ ಧಾರವಾಡ:** ರಾಜ್ಯ ರಾಜಕಾರಣದಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದ ಧಾರವಾಡದ ಜಿಪಂ ಸದಸ್ಯ ಯೋಗೀಶ್ ಗೌಡ ಹತ್ಯೆ ಪ್ರಕರಣ ಇದೀಗ ಮತ್ತೊಂದು ಕುತೂಹಲಕಾರಿ ಘಟ್ಟಕ್ಕೆ ಬಂದು ನಿಂತಿದೆ. ಏಪ್ರಿಲ್ 17, 2026 ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಕಾಂಗ್ರೆಸ್ ನಾಯಕ ವಿನಯ್ ಕುಲಕರ್ಣಿ ಹಾಗೂ ಇತರರಿಗೆ 'ಜೀವಾವಧಿ ಶಿಕ್ಷೆ' ವಿಧಿಸಿ ತೀರ್ಪು ನೀಡಿತ್ತು. ಸದ್ಯ ಪರಪ್ಪನ ಅಗ್ರಹಾರ ಜೈಲು ಸೇರಿರುವ ವಿನಯ್ ಕುಲಕರ್ಣಿ, ಇದೀಗ ತಮ್ಮ 'ಶಾಸಕ ಸ್ಥಾನ'ವನ್ನು ಉಳಿಸಿಕೊ ಳ್ಳುವ ಸಲುವಾಗಿ ನೇರವಾಗಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಭಾರತೀಯ ಚುನಾವಣಾ ಆಯೋಗದ 'ಜನಪ್ರತಿನಿಧಿ ಕಾಯ್ದೆ'ಯ ಪ್ರಕಾರ, ಹಾಲಿ ಶಾಸಕನಿಗೆ ಯಾವುದೇ ಪ್ರಕರಣದಲ್ಲಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಜೈಲು ಶಿಕ್ಷೆಯಾದರೆ, ಆತನ ಶಾಸಕ ಸ್ಥಾನ ತಕ್ಷಣವೇ ರದ್ದಾಗುತ್ತದೆ. ಈ ನಿಯಮದಡಿ ಧಾರವಾಡ ಗ್ರಾಮಾಂತರ ಕ್ಷೇತ್ರದ ಶಾಸಕರಾಗಿರುವ ವಿನಯ್ ಕುಲಕರ್ಣಿ ಅವರು ಸ್ಥಾನ ಕಳೆದುಕೊ ಳ್ಳುವುದು ಬಹುತೇಕ ಖಚಿತವಾಗಿತ್ತು. ಈ ಅನರ್ಹತೆಯ ಭೀತಿಯಿಂದ ಪಾರಾಗಲು ಕುಲಕರ್ಣಿ ಅವರು ತಮ್ಮ ವಕೀಲರ ಮೂಲಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಕೆಳ ಹಂತದ ಕೋರ್ಟ್ ನೀಡಿರುವ ತೀರ್ಪಿಗೆ ಹಾಗೂ ಶಿಕ್ಷೆಯ ಪ್ರಮಾಣಕ್ಕೆ ತುರ್ತಾಗಿ 'ತಡೆಯಾಜ್ಞೆ' ನೀಡುವಂತೆ ಮನವಿ ಮಾಡಿದ್ದಾರೆ. ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ 2016ರ ಜೂನ್ 15ರಂದು ಧಾರವಾಡದ ಜಿಮ್‌ನಲ್ಲಿ ಯೋಗೀಶ್ ಗೌಡ ಅವರನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡ ಲಾಗಿತ್ತು. 2019ರಲ್ಲಿ ಈ ಕೇಸ್ ಅನ್ನು ಸಿಬಿಐಗೆ ವಹಿಸಲಾಗಿತ್ತು. ಸಿಬಿಐ ಅಧಿಕಾರಿ ಗಳು ಮಂಡಿಸಿದ ಬಲವಾದ ಸಾಕ್ಷ್ಯಾಧಾ ರಗಳ ಆಧಾರದ ಮೇಲೆ ಕುಲಕರ್ಣಿ ಅವರನ್ನು ಅಪರಾಧಿ ಎಂದು ಘೋಷಿಸ ಲಾಗಿತ್ತು. ಇದೀಗ ಕುಲಕರ್ಣಿ ಅವರ ಜೊತೆಗೆ ಅವರ ಸಂಬಂಧಿ ಹಾಗೂ ಮತ್ತೊಬ್ಬ ಆರೋಪಿ ಚಂದ್ರಶೇಖರ್ ಇಂಡಿ ಕೂಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಸೋಮವಾರ ಈ ತುರ್ತು ಮೇಲ್ಮನವಿಯ ವಿಚಾರಣೆ ನಡೆಯುವ ನಿರೀಕ್ಷೆಯಿದ್ದು, ಹೈಕೋರ್ಟ್ ನೀಡುವ ಆದೇಶದ ಮೇಲೆಯೇ ಕುಲಕರ್ಣಿಯವರ ಮುಂದಿನ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ.

# ಒಂದೇ ಬೈಕ್ ಕಳ್ಳತನ ಪ್ರಕರಣದ ಬೆನ್ನುಹತ್ತಿದ ಪೊಲೀಸರಿಗೆ ಸಿಕ್ಕಿತು 20 ಬೈಕ್‌ಗಳ ಭಾರಿ ಬೇಟೆ!



**ಬೆಳಗಾವಿ ವಾರ್ತೆ ಬೆಳಗಾವಿ:** ಯಳ್ಳೂರ ಗ್ರಾಮದಲ್ಲಿ ನಡೆದ ಒಂದು ಮೋಟಾರ್‌ಸೈಕಲ್ ಕಳ್ಳತನ ಪ್ರಕರಣದ ತನಿಖೆ ಬೆಳಗಾವಿ ಗ್ರಾಮೀಣ ಪೊಲೀಸರ ಕೈಯಲ್ಲಿ ದೊಡ್ಡ ಕಳ್ಳತನ ಜಾಲದ ಸುಳಿವಾಗಿ ಮಾರ್ಪಟ್ಟಿದೆ.

ಮೂವರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ಅವರಿಂದ ಸುಮಾರು 11.73 ಲಕ್ಷ ರೂ. ಮೌಲ್ಯದ ಒಟ್ಟು 20 ಮೋಟಾರ್‌ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಹೊನಗಾ ಗ್ರಾಮದ ದಿಲೀಪ ತುಕಾರಾಮ ಜಾಧವ ಅವರ ಮೋಟಾರ್‌ಸೈಕಲ್ ಯಳ್ಳೂರ ಗ್ರಾಮದಲ್ಲಿ ಕಳವಾಗಿತ್ತು. ಈ ಕುರಿತು ಏಪ್ರಿಲ್ 23ರಂದು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ವಿಶೇಷ ಪೊಲೀಸ್ ತಂಡ ರಚಿಸಿ ತನಿಖೆ ಆರಂಭಿಸಿದ್ದರು. ಪೊಲೀಸರ ಚುರುಕು ಕಾರ್ಯಾಚರಣೆಯಿಂದ ಏಪ್ರಿಲ್ 25ರಂದು ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು.

ಬಂಧಿತರನ್ನು ಗೋಕಾಕ ತಾಲೂಕಿನ ಹೀರೆಹಟ್ಟಿ ಗ್ರಾಮದ ಫಕೀರಪ್ಪ ಸಿದ್ದಪ್ಪ ಕರಿಗಾರ, ಹುಕ್ಕೇರಿ ತಾಲೂಕಿನ ಆಲದಾಳ ಗ್ರಾಮದ ರಮೇಶ ಪ್ರಭು ಪಾಟೀಲ ಮತ್ತು ಬೆಳಗಾವಿ ತಾಲೂಕಿನ ಕೆಂಚನಟ್ಟಿ ಮಾರ್ಕಂಡೇಯ ನಗರದ ಕಮಲಪ್ಪ ಅಲಿಯಾಸ್ ಕಮಲು ಯಲ್ಲಪ್ಪ ಗುಂಡ್ಯಾಗೋಳ ಎಂದು ಗುರುತಿಸಲಾಗಿದೆ.

ವಿಚಾರಣೆ ವೇಳೆ ಆರೋಪಿಗಳು ಬೆಳಗಾವಿ ಗ್ರಾಮೀಣ ಠಾಣೆ ವ್ಯಾಪ್ತಿಯ ಯಳ್ಳೂರ, ಮಾರ್ಕಂಡೇಯ ನಗರ, ಟಿಳಕವಾಡಿ, ಶಹಾಪುರ ಹಾಗೂ ಹುಕ್ಕೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿಯೂ ಮೋಟಾರ್‌ಸೈಕಲ್‌ಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರಿಂದ ಯಮಹಾ, ಹೀರೋ ಸ್ಪ್ಲೆಂಡರ್, ಟಿವಿಎಸ್, ಸುಜುಕಿ ಸೇರಿದಂತೆ ವಿವಿಧ ಕಂಪನಿಗಳ ಒಟ್ಟು 20 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

# ಜಿಲ್ಲಾಧಿಕಾರಿಗಳಿಗೆ ಮನವಿ; ದೋಣಿ ನದಿ ಹೂಳು ಎತ್ತಿ ಶಾಶ್ವತ ಪರಿಹಾರಕ್ಕೆ ಅಗ್ರಹ



**ಬೆಳಗಾವಿ ವಾರ್ತೆ ವಿಜಯಪುರ :** ಜಿಲ್ಲೆ ಪಂಚ ನದಿಗಳ ಜಿಲ್ಲೆ ಎಂದು ಖ್ಯಾತಿಯಾಗಿದೆ, ಆದರೆ ಪ್ರತಿ ಎರಡು ವರ್ಷ ಮೂರು ವರ್ಷಕ್ಕೊಮ್ಮೆ ಒಣ ಬರ ಹಸಿಬರ ತಪ್ಪಿದ್ದಲ್ಲ ಇದರಿಂದ ಈ ಭಾಗದ ರೈತರು ಸಾಕಷ್ಟು ನಷ್ಟ ಅನುಭವಿ ಸುತ್ತಿದ್ದಾರೆ ಕೂಡಲೇ ಇದಕ್ಕೊಂದು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ರಾದ ಸಂಗಮೇಶ ಸಗರ ಮಾತನಾಡಿದರು

ಅದರಲ್ಲಿ ಪ್ರಮುಖವಾಗಿ ಮಹಾರಾಷ್ಟ್ರದಿಂದ ಇತ್ತ ಕರ್ನಾಟಕದ ಮಾರ್ಗವಾಗಿ ಆಂಧ್ರಕ್ಕೆ ಸೇರುವಂತಹ ದೋಣಿಯು ಸುಮಾರು 215 ಇಟ ಉದ್ದ ಇದ್ದು ಇದರಲ್ಲಿ ಸಾಕಷ್ಟು ಹೂಳು ತುಂಬಿ, ಮಳೆಗಾಲದಲ್ಲಿ ದೋಣಿ ತುಂಬಿ ಹರಿಯುವಾಗ ಆ ಹೊಳಿನಿಂದ ನೀರು ದೋಣಿ ನೀರು ಅಕ್ಕಪಕ್ಕದ ಜಮೀನುಗಳಿಗೆ ನುಗ್ಗಿ ತನ್ನ ರುದ್ರಾವತಾರದೊಂದಿಗೆ ಸಾಕಷ್ಟು ನಷ್ಟ ಉಂಟು ಮಾಡುತ್ತದೆ

ಇದಕ್ಕಾಗಿ ಹಲವಾರು ವರ್ಷಗಳಿಂದ ಈ ದೋಣಿ ಅಕ್ಕಪಕ್ಕದ ರೈತರು,ರೈತ ಮುಖಂಡರು, ರೈತ ಸಂಘದವರು ಹಾಗೂ ರೈತಪರ ಚಿಂತಕರು ಜಿಲ್ಲಾಧಿಕಾರಿಗಳಿಗೆ ಹಾಗೂ ರಾಜ್ಯ ಸರಕಾರಕ್ಕೆ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಿದರು ಇದಕ್ಕೆ ಒಂದು ಶಾಶ್ವತ ಪರಿಹಾರ ಸಿಕ್ಕಿಲ್ಲ

ಈ ಕೂಡಲೇ ಕರ್ನಾಟಕದಲ್ಲಿ ಹಾದು ಹೋಗುವಂತ ದೋಣಿಯ ಸಂಪೂರ್ಣ ಅಳತೆಯನ್ನು ಮಾಡಿ ಅಲ್ಲಿರುವಂಥ ಹೂಳನ್ನ ತೆಗೆದು ಅಕ್ಕಪಕ್ಕದಲ್ಲಿ ಕಲಿನ ತಡೆಗೋಡೆ ಮಾಡಿ ದೊಡ್ಡ ದೊಡ್ಡ ಮರಗಳನ್ನು ಹಚ್ಚುವುದರ ಮೂಲಕ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು, ಇದಕ್ಕಾಗಿ ವಿಜಯಪುರದ ಜಿಲ್ಲಾಧಿಕಾರಿಗಳಾದಂತ ಡಾಕ್ಟರ್ ಕೆ ಆನಂದ ಅವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಡಾ. ಎಂಬಿ ಪಾಟೀಲ್ ಅವರು ರಾಜ್ಯ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿ ಅದಕ್ಕೆ ಬೇಕಾಗುವಂತ ಅನುದಾನವನ್ನ ಮಂಜೂರು ಮಾಡಿಸಬೇಕು ಅಂದಾಗ ಮಾತ್ರ ದೋಣಿಯ ಅಕ್ಕ ಪಕ್ಕದ ರೈತರಿಗೆ ಅನುಕೂಲವಾಗಲಿದೆ

ಅದು ಬಿಟ್ಟು ರೈತರು ನಷ್ಟಗೊಂಡಾಗ ಕೇವಲ ನೆಪ ಮಾತ್ರಕ್ಕೆ ಒಂದು ಕೋಟಿ ಎರಡು ಕೋಟಿ ಐದು ಕೋಟಿ ಅಂತ ಹೇಳಿ ಪ್ರತಿ ವರ್ಷ ನೀವು ಅನುದಾನ ಇಟ್ಟರೂ ಕೂಡ ಇದಕ್ಕೆ ಯಾವುದು ಶಾಶ್ವತ ಪರಿಹಾರ ಆಗುವುದಿಲ್ಲ ಕೂಡಲೇ ಎಚ್ಚೆತ್ತುಕೊಂಡು ಶಾಶ್ವತ ಪರಿಹಾರಕ್ಕಾಗಿ ಸಾವಿರ ಕೋಟಿ ರೂಪಾಯಿ ಮೀಸಲಿಡಬೇಕು ಅಂತ ಹೇಳಿ ಈ ಸಂದರ್ಭದಲ್ಲಿ ಆಗಮಿಸುತ್ತೇವೆ. ಈ ಸಂಧರ್ಭದಲ್ಲಿ ರೈತ ಮುಖಂಡರಾದ ಮಲ್ಲಿಕಾರ್ಜುನ ಭಟಗಿ, ಅಭಿಷೇಕ್ ಹೂಗಾರ ಇದ್ದರು.

# ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ ವಾರ್ತೆ ಧಾರವಾಡ:** ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ 2026-27 ನೇ ಸಾಲಿನ ಪ್ರಥಮ ಪಿಯುಸಿ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಏಪ್ರೀಲ್ 29, 2026 ರೊಳಗಾಗಿ ವೆಬ್‌ಸೈಟ್ https://kreis.karnataka.gov.in ಅಥವಾ https://kreisportal.karnataka.gov.in/ipuappln/forms/online1 ಮೂಲಕ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹೆಬ್ಬಳ್ಳಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು ಮೊ:7619168507, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮತ್ತು ಕಾಲೇಜು ಮೊ:9448307622, ತರ್ಲಘಟ್ಟ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು 9663338287, ಗಂಜಿಗಟ್ಟಿ ಮೊರಾರ್ಜಿ ದೇಸಾಯಿ ವಸತಿ ಶಾಲೆ & ಕಾಲೇಜು ಮೊ. 7829956092 ಗೆ ಸಂಪರ್ಕಿಸಬಹುದು ಎಂದು ಮೊರಾರ್ಜಿ ದೇಸಾಯಿ ವಸತಿ ಕಾಲೇಜು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ ಸಂಭ್ರಮ-2026; ಡಾ. ರಾಜ್‌ಕುಮಾರ್ ಚಲನಚಿತ್ರ ಗೀತೆಗಳ ಗಾಯನ, ಮಿಮಿಕ್ರಿ

# ಡಾ.ರಾಜಕುಮಾರ ಸಿನೇಮಾಗಳಲ್ಲಿ ಉತ್ತಮ ಜೀವನ ಸಂದೇಶವಿದೆ: ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ



**ಬೆಳಗಾವಿ ವಾರ್ತೆ ಕೊಪ್ಪಳ :** ಡಾ.ರಾಜಕುಮಾರ ಅವರು ನಟಿಸಿದ ಚಲನಚಿತ್ರಗಳಲ್ಲಿ ಪ್ರೇಕ್ಷಕರಿಗೆ ಮನರಂಜನೆ ಜೊತೆಗೆ ಉತ್ತಮ ಜೀವನ ಸಂದೇಶವಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಹೇಳಿದರು.

ಡಾ. ರಾಜ್‌ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 24 ರಂದು ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದ್ದ ರಾಜ್ ಸಂಭ್ರಮ-2026 ಡಾ. ರಾಜ್‌ಕುಮಾರ್ ರವರ ಚಲನಚಿತ್ರ ಗೀತೆಗಳ ಗಾಯನ ಮತ್ತು ಡಾ. ರಾಜ್‌ಕುಮಾರ್ ಅವರ ಸಿನೆಮಾಗಳ ಡೈಲಾಗ್ (ಮಿಮಿಕ್ರಿ) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ರಾಜಕುಮಾರ ಅವರು ನಾಡು-ನುಡಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಗೋಕಾಕ್ ಚಳವಳಿ ಸೇರಿದಂತೆ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ ಎಂದರು.

ಡಾ.ರಾಜ್‌ಕುಮಾರ್ ಅವರು ಹೆಚ್ಚು ಓದದಿದ್ದರೂ ಅವರು ತೋರಿದ ಸಾಧನೆ ಅನನ್ಯ. ಈಜು, ಯೋಗದಂತಹ ಹವ್ಯಾಸ ರೂಢಿಸಿಕೊಂಡಿದ್ದರು ಎಂದರು. ಅಧಿಕಾರಿಗಳು ಮುತುವರ್ಜಿ ವಹಿಸಿದ್ದರಿಂದ ಈ ಬಾರಿ ಕೊಪ್ಪಳ ಜಿಲ್ಲೆಯಲ್ಲಿ ಗೀತಾಗಾಯನ ಕಾರ್ಯಕ್ರಮ ಸಾಧ್ಯವಾಗಿದೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯು ಸಹಯೋಗ ನೀಡಿದೆ ಎಂದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯರು ಹಾಗೂ ಲೇಖಕಿ ಸಾವಿತ್ರಿ ಮುಜುಮದಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ರಾಜ್‌ಕುಮಾರ್ ಅವರು ಕನ್ನಡದ ಅಸ್ಮಿತೆ. ಪ್ರಭಾವಿ ನಟರಾಗಿ ಸುಮಾರು ನಾಲ್ಕು ದಶಕಗಳಿಗೂ ಅಧಿಕ ಕಾಲ ಚಿತ್ರರಂಗದಲ್ಲಿ ತಮ್ಮದೆ ಆದ ಚಾಪು ಮೂಡಿಸಿದ್ದರು. ನಾಟಕ ಕಂಪನಿಗಳಿಂದ ಅಭಿನಯ ಆರಂಭಿಸಿ ಅನೇಕ ಚಿತ್ರಗಳಲ್ಲಿ ಅದ್ಭುತವಾಗಿ ನಟಿಸಿ ಕನ್ನಡಿಗರ ಮನದಲ್ಲಿ ಅಜರಾಮರವಾಗಿದ್ದಾರೆ. ನಟನೆ, ಸಂಭಾಷಣೆ, ಸಂಗೀತ, ಸ್ವರ ಸಂಯೋಜನೆ ಅರ್ಥಗರ್ಭಿತವಾಗಿವೆ.

ರಾಜ್‌ಕುಮಾರ್ ಅವರು ಕೇವಲ ನಟರಾಗದೇ ಗೋಕಾಕ್ ಚಳುವಳಿ ಸೇರಿದಂತೆ ಅನೇಕ ಹೋರಾಟಗಳಲ್ಲಿ ಭಾಗಿಯಾಗಿ ಕನ್ನಡ ಚಿತ್ರರಂಗಕ್ಕೆ ಮಾದರಿಯಾಗಿದ್ದಾರೆ ಎಂದರು.

ಕನ್ನಡ ಪರ ಹೋರಾಟಗಾರರಾದ ಮಹಾಂತೇಶ ಕೊತಬಾಳ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಮಂಜುನಾಥ ಗೊಂಡಬಾಳ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಆರ್.ಹೇಮಂತ್ ಕುಮಾರ್, ಹಿರಿಯ ಚಲನಚಿತ್ರ ಸಾಹಿತಿಗಳಾದ ಡಾ. ಮಹಾಂತೇಶ ಮಲ್ಲನಗೌಡ್ರ, ಹಿರಿಯ ಸಾಹಿತಿಗಳಾದ ಡಾ. ಅಲ್ಲಮಪ್ರಭು ಬೆಟ್ಟದೂರು, ಕನ್ನಡ ಪರ ಹೋರಾಟಗಾರರಾದ ಮಂಜುನಾಥ ಸುತ್ತೂರು, ಡಿವೈಎಸ್ಪಿ ಮುತ್ತಣ್ಣ ಸವರಗೋಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕರ್ಣಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಅವರು ಸ್ವಾಗತಿಸಿದರು. ಗ್ರಂಥಾಲಯ ಇಲಾಖೆಯ ನಾಗರಾಜನಾಯಕ ಡೊಳ್ಳಿನ್ ಅವರು ನಿರೂಪಿಸಿದರು.

**ಸನ್ಮಾನ:**

ಗೋಕಾಕ್ ಚಳುವಳಿ ಸಂದರ್ಭದಲ್ಲಿ ಡಾ.ರಾಜ್‌ಕುಮಾರ್ ಅವರೊಂದಿಗೆ ಭಾಗವಹಿಸಿದ ಅನೇಕ ಮಹನಿಯರ ಪೈಕಿ ಮಂಚೂಣಿಯಲ್ಲಿದ್ದ ಕೆಲ ಹೋರಾಟಗಾರರಿಗೆ, ಕನ್ನಡಪರ ಸಂಘಟಿಕರಿಗೆ ಚಲನಚಿತ್ರ ಅಕಾಡೆಮಿಯಿಂದ ಸನ್ಮಾನಿಸಲಾಯಿತು.

**ಹಾಡಿನ ಹೊಳೆ:** ಸುಮಾರು 60ಕ್ಕೂ ಹೆಚ್ಚು ಜನರು ಸತತ 4 ಗಂಟೆಗೂ ಹೆಚ್ಚಿನ ಸಮಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ಡಾ.ರಾಜಕುಮಾರ ಹಾಡುಗಳ ಹೊಳೆಯನ್ನೇ ಹರಿಸಿದರು. ಕೆಲವರು ಮಿಮಿಕ್ರಿ ಮಾಡಿದರು.

ಸಾಹಿತ್ಯ ಗೊಂಡಬಾಳ ಹಾಗೂ ಅಕ್ಷರ ಗೊಂಡಬಾಳ ನಾಡಗೀತೆ ಹೇಳಿದರು.

# ಶಿಕ್ಷಣದಿಂದ ಯಾವೊಬ್ಬ ಮಗುವೂ ವಂಚಿತರಾಗಬಾರದು: ಆಯ್ ಪಿ ಎಸ್ ಅಧಿಕಾರಿ ರವೀಂದ್ರ ಗಡಾದಿ




**ಬೆಳಗಾವಿ ವಾರ್ತೆ ಅಥಣಿ :** ಬಡ ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಆಸರೆಯಾಗುವ ಅವಶ್ಯಕತೆ ಇಂದಿನ ದಿನಗಳಲ್ಲಿ ಹೆಚ್ಚಿದ್ದು, ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಎಲ್ಲತರದಿಂದಲೂ ಸಹಾಯಕ್ಕೆ ಸಿದ್ದ ಎಂದು ಆಯ್ ಪಿ ಎಸ್ ಅಧಿಕಾರಿ ರವೀಂದ್ರ ಗಡಾದಿ ಹೇಳೀದರು.

ಅವರು ತಾಲೂಕಿನ ತೆಲಸಂಗ ಗ್ರಾಮದ ಸರ್ಕಾರಿ ಕನ್ನಡ ಶಾಸಕರ ಮಾದರಿ ಶಾಲೆಯಲ್ಲಿ ಆಂತರಿಕ ಭದ್ರತಾ ವಿಭಾಗದ (ಧಾರವಾಡ ವಲಯ) ಪೊಲೀಸ್ ಅಧೀಕ್ಷಕ ರವೀಂದ್ರ ಗಡಾದಿ ಜನ್ಮದಿನದ ಪ್ರಯುಕ್ತ ಗ್ರಾಮಸ್ಥರು ಹಮ್ಮಿಕೊಂಡಿದ್ದ ಬಡ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಶಿಕ್ಷಣದಿಂದ ಯಾವೊಬ್ಬ ಮಗುವೂ ವಂಚಿತರಾಗಬಾರದು. ಸಾಕ್ಷರ ಸಮಾಜದಿಂದ ಮಾತ್ರ ದೇಶದ ಉತ್ತಮ ಭವಿಷ್ಯ ಸಾಧ್ಯ, ಸಮಾಜದಲ್ಲಿ ಬದಲಾವಣೆ ತರಲು ಶಿಕ್ಷಣವೇ ಪ್ರಬಲ ಅಸ್ತ್ರವಾಗಿದೆ. ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆತಾಗ ಮಾತ್ರ ಸಮೃದ್ಧ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಬಡತನ ಎಂಬುದು ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಗ್ರಾಮಸ್ಥರು ಹಮ್ಮಿಕೊಂಡಿರುವ ಈ ಕಾರ್ಯ ಶ್ಲಾಘನೀಯ ಎಂದರು.

ಈ ವೇಳೆ ಡಾ. ಆರ್.ಡಿ. ಪೂಜಾರಿ, ರಾಜಕುಮಾರ ಪರ್ನಾಕರ, ಎ.ಆರ್. ಜೋಶಿ, ಸಿದ್ದರಾಮಯ್ಯ ಪೂಜಾರಿ, ಗುರುಯ್ಯ ಮಠಪತಿ, ಬಸವರಾಜ್ ಅವಟಿ, ಡಾ. ಪ್ರಕಾಶ ಪರ್ನಾಕರ, ಶಿವಾನಂದ ಪೂಜಾರಿ, ಸಂಗಮೇಶ ಉಂಡೋಡಿ, ಜಗದೀಶ ಪೂಜಾರಿ, ಕಾಶಿಲಿಂಗ ಲೋಕಂಡೆ, ಭೀಮಪ್ಪಾ ಬನಗೊಂಡ, ಶ್ರವಣ ಪರ್ನಾಕರ, ರಾಜು ಹೊನಕಾಂಬಳೆ ಸೇರಿದಂತೆ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಇಟಗಿ ಆದರ್ಶ ಶಾಲೆಗೆ ಪ್ರತಿಶತ 100 ಫಲಿತಾಂಶ



ಜ್ಯೋತಿ ಶಿವಪುತ್ರಪ್ಪ ಮಡ್ಡಿ 607 97.12% ಶಾಲೆಗೆ ಪ್ರಥಮ | ಸಹನಾ ಎಸ್ ಮುತ್ತಿನ ಪೆಂಡಿಮಠ 605 96.80% ದ್ವಿತೀಯ | ಶಾರದಾ ಈಶಪ್ಪ ಬನ್ನಿಕೊಪ್ಪ 603 96.48% ತೃತೀಯ

**ಬೆಳಗಾವಿ ವಾರ್ತೆ ಕುಕನೂರು:** ತಾಲೂಕಿನ ಪ್ರತಿಷ್ಠಿತ ಪಿಎಂಶ್ರೀ ಆದರ್ಶ ವಿದ್ಯಾಲಯ ಇಟಗಿ ಶಾಲೆಯ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ದಾಖಲಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ವರ್ಷ ಪರೀಕ್ಷೆಗೆ ಹಾಜರಾದ ಒಟ್ಟು 68 ವಿದ್ಯಾರ್ಥಿಗಳಲ್ಲಿ ಎಲ್ಲ 68 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಲ್ಲಿ 25 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 36 ವಿದ್ಯಾರ್ಥಿಗಳು ಪ್ರಥಮ ದರ್ಜೆ, 5 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಜ್ಯೋತಿ ಶಿವಪುತ್ರಪ್ಪ ಮಡ್ಡಿ 607 97.12% ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.ಜ್ಯೋತಿ ಶಿವಪುತ್ರಪ್ಪ ಮಡ್ಡಿ 607 97.12% ಶಾಲೆಗೆ ಪ್ರಥಮ, ಸಹನಾ ಎಸ್ ಮುತ್ತಿನಪೆಂಡಿಮಠ 605 96.80% ದ್ವಿತೀಯ, ಶಾರದಾ ಈಶಪ್ಪ ಬನ್ನಿಕೊಪ್ಪ 603 96.48% ತೃತೀಯ.

**ಸಾಧನೆಗೆ ಕಾರಣ:** ಶಾಲೆಯ ಮುಖ್ಯ ಶಿಕ್ಷಕ ಶ್ರೀ ರಾಮ ರೆಡ್ಡಪ್ಪ ಅವರು ಮಾತನಾಡಿ, "ಶಿಕ್ಷಕರ ತಂಡದ ಶ್ರದ್ಧೆ, ವಿದ್ಯಾರ್ಥಿಗಳ ಅವಿರತ ಪರಿಶ್ರಮ, ಪೋಷಕರ ಸಹಕಾರ ಹಾಗೂ ಇಲಾಖೆಯ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಯಿತು. ಬೆಳಗ್ಗೆ 5 ಗಂಟೆಯಿಂದ ಸಂಜೆ 6:30 ಗಂಟೆವರೆಗೆ ವಿಶೇಷ ತರಗತಿಗಳು, ವಾರದ ಪರೀಕ್ಷೆ, ವೈಯಕ್ತಿಕ ಗಮನ ನೀಡಿದ್ದೇ ನಮ್ಮ ಯಶಸ್ಸಿನ ಗುಟ್ಟು" ಎಂದರು.

**ಸಂಭ್ರಮಾಚರಣೆ:** ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಶಾಲೆಯ ಆವರಣದಲ್ಲಿ ಸಂಭ್ರಮ ಮನೆ ಮಾಡಿತ್ತು. ವಿದ್ಯಾರ್ಥಿಗಳು ಸಿಹಿ ಹಂಚಿ, ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಕಳಕನ ಗೌಡ ಸಾದರ ಹಾಗೂ ಎಲ್ಲಾ ಸದಸ್ಯರು ಶಿಕ್ಷಕ ವೃಂದ ಮಕ್ಕಳಿಗೆ ಶುಭ ಕೋರಿದರು.

# ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ

## ಮಕ್ಕಳು ಮೋಬೈಲ್, ಟಿವಿಗಳಿಂದ ದೂರವಿರಬೇಕು: ನ್ಯಾ.ಸಿ.ಎಸ್. ಶಿವನಗೌಡರ

**ಬೆಳಗಾವಿ ವಾರ್ತೆ ಗದಗ :** ಮಕ್ಕಳು ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಅವರಲ್ಲಿ ಮಾನಸಿಕ ಕಾಯಿಲೆಗಳು ಹೆಚ್ಚಾಗುತ್ತಿವೆ ಎಂದು ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸಿ. ಎಸ್. ಶಿವನಗೌಡರ ಅವರು ಹೇಳಿದರು.



ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ. 10ರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಇವರ ಸಹಯೋಗದಲ್ಲಿ ಜರುಗಿದ ಜಿಲ್ಲಾಮಟ್ಟದ ಬೇಸಿಗೆ ಶಿಬಿರದವನ್ನು ಉದ್ಘಾಟಿಸಿ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಇಂತಹ ಶಿಬಿರಗಳ ಅವಶ್ಯಕತೆ ಹೆಚ್ಚು ಇದೆ. ಏಕೆಂದರೆ ಹಿಂದಿನ ದಿನಗಳಲ್ಲಿ ಮೊಬೈಲ್‌ಗಳು, ಟಿವಿ, ಇರುತ್ತಿರಲಿಲ್ಲ ಇದರಿಂದ ಮಕ್ಕಳು ಪ್ರಕೃತಿಯಲ್ಲಿ ಬೆರೆತು ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡು ಕ್ರಿಯಾಶೀಲರಾಗಿ, ಸದೃಢವಾಗಿ ಇರುತ್ತಿದ್ದರು. ಆದರೆ, ಇಂದಿನ ದಿನಗಳಲ್ಲಿ ಮಕ್ಕಳು ಟಿವಿ ಹಾಗೂ ಮೊಬೈಲ್‌ಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿರುವುದರಿಂದ ಅವರಲ್ಲಿ ಸಾಕಷ್ಟು ಖಿನ್ನತೆಗಳು ಕಾಣಸಿಗುತ್ತವೆ. ಮಕ್ಕಳು ಓದಿನ ಜೊತೆಗೆ ತಮ್ಮ ಆಸಕ್ತಿಯುತವಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಮನಸ್ಸು ಮತ್ತು ಆರೋಗ್ಯವನ್ನು ಸದೃಢವಾಗಿಟ್ಟುಕೊಳ್ಳಬೇಕಾಗಿದೆ ಮತ್ತು ಮನೆಯಲ್ಲಿ ತಂದೆ-ತಾಯಿಗಳಿಗೆ ಸಹಾಯ ಮಾಡಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಬೇಸಿಗೆ ಶಿಬಿರದ ಮಹತ್ವವನ್ನು ಮೊದಲು ತಿಳಿದುಕೊಳ್ಳಬೇಕು. ಮಕ್ಕಳಲ್ಲಿ ಪಠ್ಯದೊಂದಿಗೆ ಕಲಾಸಕ್ತಿ ಮೂಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಾಗೂ ಜಿಲ್ಲಾ ಬಾಲಭವನ ಸಮಿತಿಯಿಂದ ಈ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ವಿಶೇಷವಾಗಿ ರೈನ್ ಡ್ಯಾನ್ಸ್, ದೇಸಿ ಆಟಗಳು, ಮಣ್ಣಿನ ಆಟಗಳು, ತಾರಾಲಯ ವೀಕ್ಷಣೆ ಸೇರಿದಂತೆ ಹಲವಾರು ಆಸಕ್ತಿದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಮಕ್ಕಳು ಇದರ ಸದುಪಯೋಗ ಪಡೆದುಕೊಂಡು ಇಲ್ಲಿ ಕಲಿತಿರುವ ವಿಷಯಗಳನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಜಯಶ್ರೀ ಆರ್. ಅವರು ಮಾತನಾಡಿ, ಬಾಲಭವನ ಸಮಿತಿಯಿಂದ ಪ್ರತಿ ವರ್ಷ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡು ಬರುತ್ತಿದೆ. 5 ರಿಂದ 16 ವರ್ಷಗಳ ಮಕ್ಕಳಿಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. 15 ದಿನಗಳವರೆಗೆ ನಡೆಯುವ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ವಿವಿಧ ಚಟುವಟಿಕೆಗಳ ಗಳೊಂದಿಗೆ ಮನೋವಿಕಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಲ್ಲಿರುವ ಸೂಕ್ತ ಪ್ರತಿಭೆಯನ್ನು ಗುರುತಿಸುವ ಕೆಲಸ ಈ ಶಿಬಿರ ಮಾಡುತ್ತಿದೆ ಎಂದು ಹೇಳಿದರು.

ಪ್ರಭಾರ ಬಿಇಒ ಎಸ್. ಪಿ. ಪ್ರಭಯ್ಯನಮಠ ಅವರು ಮಾತನಾಡಿ, ಶಾಲೆ ಮತ್ತು ಶಿಬಿರಗಳಿಗೆ ಬಹಳ ವ್ಯತ್ಯಾಸವಿದೆ ಶಾಲೆಯಲ್ಲಿ ಒಂದು ಕೋಣೆಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಆದರೆ, ಶಿಬಿರದಲ್ಲಿ ಮುಕ್ತ ವಾತಾವರಣದ ಪರಿಸರದಲ್ಲಿ ಅವರ ಆಸಕ್ತಿದಾಯಕ ಕಲಿಕಾ ವಿಷಯಗಳಿಗೆ ಶಿಕ್ಷಣ ನೀಡಲಾಗುತ್ತದೆ. ಪಾಲಕರು ಮಕ್ಕಳಿಗೆ ಉನ್ನತಮಟ್ಟದ ಶಿಕ್ಷಣ ನೀಡುವ ತವಕದಲ್ಲಿ ಅವರಲ್ಲಿ ಸಂಸ್ಕಾರ ಕಲಿಸುವುದನ್ನು ಕಡಿಮೆ ಮಾಡಲಾಗುತ್ತಿದೆ. ಇದರಿಂದ ವಿದ್ಯಾವಂತರಾದ ಮಕ್ಕಳು ಮುಂದೆ ತಂದೆ-ತಾಯಿಗಳನ್ನು ವೃದಾಶ್ರಮಕ್ಕೆ ಸೇರಿಸುತ್ತಿರುವುದನ್ನು ನಾವು ನೋಡುತ್ತಿದ್ದೆವೆ ಅದ್ದರಿಂದ ಮಕ್ಕಳಿಗೆ ವಿದ್ಯೆ ಜೊತೆಗೆ ಸಂಸ್ಕಾರ ನೀಡುವುದನ್ನು ನಾವು ಇಂದಿನಿಂದಲೆ ಕಲಿಸಬೇಕು ಎಂದು ಹೇಳಿದರು.

ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ. ರಾಜೇಂದ್ರ ಗಡಾದ ಅವರು ಮಾತನಾಡಿ, ಶಾಲೆಗಳಲ್ಲಿ ಸೀಮಿತ ವರ್ಗಗಳು ಇರುತ್ತವೆ. ಆದರೆ, ಈ ಬೇಸಿಗೆ ಶಿಬಿರದಲ್ಲಿ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಮೂಲಕ ಅವರಲ್ಲಿ ಅಡಗಿರುವ ಸೂಕ್ತ ಪ್ರತಿಭೆಗಳಿಗೆ ನೀರೆರೆಯುವ ಕೆಲಸ ಮಾಡಲಾಗುತ್ತಿದೆ ಈ ಹಿಂದೆ ಅವಿಭಕ್ತ ಕುಟುಂಬದಲ್ಲಿ ಬೆಳೆದು ಮಕ್ಕಳು ಸಂಸ್ಕಾರಯುತ ಜೀವನ ನಡೆಸುತ್ತಾ ಬಂದಿದ್ದರು. ಆದರೆ, ಹಂತ ಹಂತವಾಗಿ ಕುಟುಂಬಗಳು ಚಿಕ್ಕದಾಗಿರುತ್ತಿರುವುದರಿಂದ ಇಂದು ನಾವಿಬ್ಬರೂ ನಮಗಿಬ್ಬರು ಎನ್ನುವ ಕಾಲವಿದೆ ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ನಾವು ಒಬ್ಬರು ನಮಗೆ ಏಕೆ ಮತ್ತೊಬ್ಬರು ಎನ್ನುವ ಕಾಲ ಬಂದರು ಬರಬಹುದು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಧೀಕ್ಷಕಿ ಲಕ್ಷ್ಮಿ ಜಿಂಗಿ ಅವರು ಮಾತನಾಡಿ, ಈ ಬೇಸಿಗೆ ಶಿಬಿರವು ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಗಳನ್ನು ಅನಾವರಣಗೊಳಿಸುವ ವೇದಿಕೆಯಾಗಿದೆ ಈ ಶಿಬಿರದಲ್ಲಿ ಜೀವನ ಕೌಶಲ್ಯಗಳು, ಆತ್ಮವಿಶ್ವಾಸ ವೃದ್ಧಿ, ಸದೃಢ ಆರೋಗ್ಯ ಸಾಮಾಜಿಕವಾಗಿ ಬೆಳವಣಿಗೆಗೆ ಅಗತ್ಯವಾಗಿದೆ ಎಂದು ಹೇಳಿದರು.

ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ದೇವೇಂದ್ರಕುಮಾರ ಹೊಸಕೇರಿ ಅವರು ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ, ರವಿ ಉಮಚಗಿ ಅವರು ಯೋಗ, ಅಶ್ವಿನಿ ಚವಡಿ ಅವರು ಕರಾಟೆ, ಚೇತನಾ ಶಿದ್ಲಿಂಗ ಅವರು ಜ್ಯುವೆಲ್ಲರಿ ಮತ್ತು ಮೆಹಂದಿ, ವಂದನಾ ನಾಗನೂರ ಅವರು ಚಿತ್ರಕಲೆ ಮತ್ತು ಕರಕುಶಲ ಕಲೆ, ವರ್ಷ ಕಲಕಂಬಿ ಶಾಸ್ತ್ರೀಯ ಸಂಗೀತವನ್ನು ಮಕ್ಕಳಿಗೆ ಹೇಳಿಕೊಡಲಿದ್ದಾರೆ. ಈ ಕಾರ್ಯಕ್ರಮವನ್ನು ರವಿ ಉಮಚಗಿ ಅವರು ನಿರೂಪಿಸಿದರು ಇದಕ್ಕೂ ಮುನ್ನ ಡಾ. ರಾಜೇಂದ್ರ ಗಡಾದ ಅವರು ಮಕ್ಕಳಿಗೆ ಗದುಗಿನ ವಿಶೇಷತೆ, ಹಿರಿಯ ಕವಿಗಳು ಮತ್ತು ಸಾಹಿತಿಗಳ ಬಗ್ಗೆ ಪ್ರಶ್ನಾವಳಿ ಮಾಡುವ ಮೂಲಕ ಮಕ್ಕಳಿಗೆ ಶಿಬಿರದ ಬಗ್ಗೆ ಆಸಕ್ತಿ ಮೂಡಿಸಿದರು.

# ಲಸಿಕೆ ಹಾಕಿಸಲು ಸಲಹೆ



**ಬೆಳಗಾವಿ ವಾರ್ತೆ ನವಲಗುಂದ:** ರೈತರು ಆರ್ಥಿಕವಾಗಿ ಸದೃಢರಾಗಲು ಸಾಕಿರುವ ಜಾನುವಾರುಗಳಿಗೆ ಕಾಲುಬಾಯಿಯಂಥಹ ಅನೇಕ ರೋಗಗಳು ಪೀಡಿಸುತ್ತಿದ್ದು, ಸರ್ಕಾರದಿಂದ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ, ರೋಗದ ನಿಯಂತ್ರಣಕ್ಕೆ ಅಭಿಯಾನ ನಡೆಸಲಾಗುತ್ತಿದ್ದು ಪ್ರತಿಯೊಬ್ಬ ರೈತರು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸುವ ಮೂಲಕ ರೋಗ ಹರಡದಂತೆ ಎಚ್ಚರಿಕೆ ವಹಿಸಬೇಕು' ಎಂದು ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ಸೋಮಲಿಂಗಪ್ಪ ಬಳಿಗೇರ ಹೇಳಿದರು.

ಅವರು ಸ್ಥಳೀಯ ಪಶು ಆಸ್ಪತ್ರೆ ಆವರಣದಲ್ಲಿ ಜಾನುವಾರುಗಳಿಗೆ ಒಂಬತ್ತನೇ ಸುತ್ತಿನ ರಾಷ್ಟ್ರೀಯ ಕಾಲು ಮತ್ತು ಬಾಯಿಬೇನೆ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪಶುವೈದ್ಯಾಧಿಕಾರಿ ಡಾ. ಮನೋಹರ ದ್ಯಾಬೇರಿ ಮಾತನಾಡಿ, ಕಾಲುಬಾಯಿ ರೋಗವು ಎತ್ತು, ಹೋರಿ, ಹಸು, ಎಮ್ಮೆಗಳಲ್ಲಿ ವ್ಯಾಪಕ ಹಾನಿ ಉಂಟುಮಾಡುತ್ತದೆ. ಹಾಲಿನ ಇಳುವರಿ ಕಡಿಮೆಯಾಗುವುದು, ಗರ್ಭಕಟ್ಟುವಿಕೆಯಲ್ಲಿ ವಿಳಂಬ ಮತ್ತು ಸಾಮರ್ಥ್ಯ ನಷ್ಟ ಸಂಭವಿಸುತ್ತದೆ. ಆದ್ದರಿಂದ ಮೂರು ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ಲಸಿಕೆ ಹಾಕುವುದು ಅತ್ಯಗತ್ಯವಾಗಿದೆ'

ಪ್ರಗತಿಪರ ರೈತ ಪ್ರಕಾಶ ಶಿಗ್ಲಿ ಮಾತನಾಡಿ ಜಾನುವಾರುಗಳಿಗೆ ಸಕಾಲದಲ್ಲಿ ಲಸಿಕೆ ಹಾಕಿಸಿ ರೋಗವನ್ನು ನಿಯಂತ್ರಿಸದಿದ್ದರೆ, ಜಾನುವಾರುಗಳು ಮೃತಪಡಲಿದ್ದು, ರೈತರಿಗೆ ನಷ್ಟ ಉಂಟಾಗಲಿದೆ. ಈ ಸಂಬಂಧ ಗ್ರಾಮೀಣ ಭಾಗದಲ್ಲಿನ ಅಂಗನವಾಡಿ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಾದಿಯರು ಮತ್ತು ಪಶುಸಖಿಯರು, ಸಿಬ್ಬಂದಿಗಳು ರೈತರಿಗೆ ಸಲಹೆ ನೀಡಿ ಜಾಗೃತಿ ಮೂಡಿಸುವಂತೆ ಕಾರ್ಯವಾಗಲಿ ಎಂದು ಪಶುವೈದ್ಯರಲ್ಲಿ ಮನವಿ ಮಾಡಿದರು.

ಸಂತೋಷ ಪಾಟೀಲ, ಸುರೇಶ ಹಡಪದ, ಈಶ್ವರ ಸಂಗಟಿ,ನಾಗನಗೌಡ ಪಾಟೀಲ, ಆಸ್ಪತ್ರೆ ಸುಪ್ರೀಡೆಂಟ್ ಬಸವರಾಜ ಮೊರಬದ, ಕಿರಿಯ ಪಶು ವೈದ್ಯಕೀಯ ಪರೀಕ್ಷಕರಾದ ಮೌನೇಶ ಮರೀತೆಪ್ಪನವರ, ಮಂಜುನಾಥ ಡೊಳ್ಳಿ, ಶಿವಾನಂದ ಹಳ್ಳಿ, ಸೇರಿ ಗ್ರಾಮದ ಮುಖಂಡರು, ಸಿಬ್ಬಂದಿಗಳು ಪಶು ಸಖಿಯರು ಇದ್ದರು.



## ಅಪೇಕ್ಷಾ ಮುಧೋಳಗೆ ಶೇ.92

**ಬೆಳಗಾವಿ ವಾರ್ತೆ ಬೆಟಗೇರಿ:** ಗೋಕಾಕ ತಾಲೂಕಿನ ಬೆಟಗೇರಿ ವಿವಿಡಿ ಸರಕಾರಿ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಪ್ರಸಕ್ತ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿನಿ ಅಪೇಕ್ಷಾ ರಾಮಪ್ಪ ಮುಧೋಳ 576 ಅಂಕ ಶೇ.92.16 ಪಡೆದಿದ್ದಾಳೆ.

ಈ ಸಾಧನೆಗೆ ಶಾಲೆಯ ಮುಖ್ಯೋಪಾಧ್ಯಯ ರಮೇಶ ಅಳಗುಂಡಿ, ಎಸ್‌ಡಿಎಂಸಿ ಅಧ್ಯಕ್ಷ ರಾಮಣ್ಣ ನೀಲಣ್ಣವರ ಮತ್ತು ಸದಸ್ಯರು, ಶಿಕ್ಷಣಪ್ರೇಮಿಗಳು, ಸ್ಥಳೀಯರು ಹರ್ಷ ವ್ಯಕ್ತಪಡಿಸಿದ್ದಾರೆ.

# ಬಸವಣ್ಣನವರ 893ನೇ ಜಯಂತೋತ್ಸವ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಅಕ್ಷಯ ಕಾಲೋನಿಯ ಮಹಾಶರಣೆ ಗಂಗಾಂಬಿಕಾ ಬಳಗದವರು ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀ ಶಕ್ತಿಯ ಪ್ರತಿಪಾದಕಿಯಾಗಿ, ಮಹಾನ್ ಸಾಧಕಿ, ಕನ್ನಡದ ಪ್ರಪ್ರಥಮ ಕವಯಿತ್ರಿ , ವೈರಾಗ್ಯನಿಧಿ, ಶಿವಶರಣೆ ಅಕ್ಕಮಹಾದೇವಿಯ ಜಯಂತಿ ಹಾಗೂ ಜಗಜ್ಯೋತಿ, ವಿಶ್ವಗುರು, ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಗುರುಬಸವಣ್ಣನವರ 893ನೇ. ಜಯಂತೋತ್ಸವ ಮತ್ತು ವಚನ ಸಂಗೀತ್ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಜಗಜ್ಯೋತಿ ಬಸವೇಶ್ವರ ಅವರ ಭಾವಚಿತ್ರಕ್ಕೆ ಹಾಗೂ ವೈರಾಗ್ಯನಿಧಿ, ಶಿವಶರಣೆ ಅಕ್ಕಮಹಾದೇವಿಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ಗೌರವ ಅರ್ಪಣೆ ಮಾಡಿ, ಭಕ್ತಿ ಪೂರ್ವಕ ನಮನಗಳನ್ನು ಸಲ್ಲಿಸಿದರು. ವಚನ ಸಂಗೀತ ಕಾರ್ಯಕ್ರಮ ಪ್ರಸ್ತುತ ಪಡಿಸಿದ ಹಿಂದೂಸ್ತಾನಿ ಸಂಗೀತ್ ಕಲಾವಿದೆ, ಕೆಸಿಡಿ ಯ ವಿದ್ಯಾರ್ಥಿನಿ ಶಿವಾನಿ ಕವಠೇಕರ್ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಅಭಿಮಾನದಿಂದ ಶಾಲು, ಮಾಲಾರ್ಪಣೆ ಮಾಡಿ ಗೌರವದಿಂದ ಆತ್ಮೀಯವಾಗಿ ಸನ್ಮಾನಿಸಿದರು. ಅಭಿನಂದಿಸಿ, ಮುಂದಿನ ಶೈಕ್ಷಣಿಕ ಜೀವನ ಯಶಸ್ವಿಯಾಗಿ ನೆರವೇರಲಿ, ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಲಿ ಎಂದು ಶುಭ ಕೋರಿದರು. ಪ್ರತಿ ಸೋಮವಾರ ಸಂಜೆ ವಿದ್ಯಾನಗರದ ಅಕ್ಷಯ ಕಾಲನಿ 4ನೇ ಹಂತ ಬನ್ನಿ ಮಂಟಪ ಉದ್ಯಾನವನದಲ್ಲಿ ಶರಣರ ಮಹಾತ್ಮರ ಚಿಂತನೆಗಳನ್ನು ಹಂಚಿಕೊಳ್ಳುವ ಉದ್ದೇಶದಿಂದ ಕೆಲವು ಹಿರಿಯ ಮಹಿಳೆಯರು ಪ್ರೊ ಸ್ನೇಹಾ ಭೂಸನೂರ ಅವರ ಜೋತೆ ಸೇರಿ ಕಟ್ಟಿಕೊಂಡ ಶರಣೆ ಗಂಗಾಂಬಿಕಾ ಬಳಗದ ವತಿಯಿಂದ ಮಹಾಮನೆ ವಿಶಿಷ್ಟ ಹಾಗೂ ವಿನೂತನ ಕಾರ್ಯಕ್ರಮ ಮಾಡುತ್ತಾ ಬಂದಿದ್ದಾರೆ. ಶರಣೆ ಗಂಗಾಂಬಿಕಾ ಬಳಗದವರು ವೈರಾಗ್ಯನಿಧಿ, ಶಿವಶರಣೆ ಅಕ್ಕಮಹಾದೇವಿಯ ಹಾಗೂ ಜಗಜ್ಯೋತಿ ಬಸವೇಶ್ವರ ಅವರ ಜಯಂತೋತ್ಸವ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿದರು. ನಿವೃತ್ ಪ್ರಾಧ್ಯಾಪಕರು, ಸಂಯೋಜಕರಾದ ಡಾ. ಸ್ನೇಹಾ ಭೂಸನೂರ, ಸಾಹಿತಿ ಕೆ ಶಾಂತಾ ಬಸವರಾಜ, ಡಾ ಪ್ರಕಾಶ್ ಮುನ್ನೋಳಿ , ಸುಜಯ್ ಸುರೇಶ ಹೊರಕೇರಿ ಸೋಹನ ಸುರೇಶ ಹೊರಕೇರಿ, ಸಹನಾ ಸುರೇಶ ಹೊರಕೇರಿ, ಸುಪ್ರಿಯಾ ಸುರೇಶ ಹೊರಕೇರಿ, ಮಂಜುಳಾ ಹಿರೇಮಠ, ಗೀತಾ ಸಾಲಿಮಠ, ರವೀಂದ್ರ ದಂಪತಿ, ವಿರುಪಾಕ್ಷಪ್ಪ ಭೂಸನೂರ , ಬಿ ಬಿ ಪಟ್ಟಣಶೆಟ್ಟಿ, ರೇಖಾ ನಾರಾ, ಸೀಮಾ ಮದನಭಾವಿ, ಮುಂತಾದವರು ಭಾಗವಹಿಸಿ, ಜಯಂತೋತ್ಸವ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿದರು. ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಶರಣೆ ಗಂಗಾಂಬಿಕಾ ಬಳಗದವರು ಮಾಡುತ್ತಿರುವ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಟಿವಿ ಮೊಬೈಲ್ ಹಾವಳಿಯಲ್ಲಿ ಪ್ರತಿ ಸೋಮವಾರ ಸಂಜೆ ಸೇರಿ ಶರಣರ, ಮಹಾತ್ಮರ ವಿಚಾರ ಚಿಂತನ ಮಂಥನ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿ, ಶುಭ ಕೋರಿದರು.

# ವೀರಶೈವ ಧರ್ಮದ ಕುರಿತು ಅವಹೇಳನ ಕುರಿತು ಮಾತನಾಡುವದನ್ನು ಖಂಡಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ: ಡಾ.ಮಲ್ಲಿಕಾರ್ಜುನ



**ಬೆಳಗಾವಿ ವಾರ್ತೆ ಗೋಕಾಕ:** ವೀರಶೈವ ಧರ್ಮದ ಕುರಿತು ಅವಹೇಳನ ಕುರಿತು ಮಾತನಾಡು ವದನ್ನು ಖಂಡಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವದೆಂದು ಕಾಶಿಯ ಡಾ.ಮಲ್ಲಿಕಾರ್ಜುನ ವಿಶ್ವರಾಧ್ಯ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು, ಶನಿವಾರದಂದು ನಗರದ ಶ್ರೀ ವಿಠ್ಠಲ ರುಕ್ಮೀಣಿ ಸಭಾ ಭವನದಲ್ಲಿ ಇಲ್ಲಿಯ ಜಂಗಮ ಕ್ಷೇಮಾಭಿವೃದ್ಧಿ ಸಂಘ ದವರು ಆಯೋಜಿಸಿದ್ಧ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ, ಪಾನವ ಸಾನಿಧ್ಯವಹಿಸಿ ಮಾತನಾಡುತ್ತಿದ್ದರು.

ವೀರಶೈವ ಧರ್ಮದಲ್ಲಿ ಯಾರನ್ನು ಟೀಕಿಸಿಲ್ಲ. ಈ ಸಿದ್ಧಾಂತವನ್ನು ಟೀಕಿಸಬಾರದು. ಪರಸ್ಪರ ಗೌರವದಿಂದ ಬಾಳಬೇಕು. ಅಗ್ಗದ ಪ್ರಚಾರ ಪಡೆಯುವ ನಿಟ್ಟಿನಲ್ಲಿ ಶ್ರೀ ಸಿದ್ಧಾಂತ ಶೀಖಾಮಣಿ ಗ್ರಂಥವನ್ನು ಟೀಕಿಸಿದ್ದಾರೆ. ಇದನ್ನು ನಾವು ಖಂಢಿಸುತ್ತೇವೆ. ಪುರಾತನ ಕಾಲದಿಂದ ಬಂದ ಈ ಪರಂಪರೆಯನ್ನು ಟೀಕಿಸಿದರೆ ನಾವು ಸುಮ್ಮನೆ ಕೂಡುವದಿಲ್ಲವೆಂದು ಹೇಳಿದರು.

ವೀರಶೈವ ಲಿಂಗಾಯತ ಧರ್ಮ ಷಟಸ್ಥಲ, ವಚನಗಳನ್ನು ಅನುಸರಿಸುತ್ತದೆ. ಶರಣ ಸಾಹಿತ್ಯವನ್ನು ಪಂಚಾಚಾರ್ಯರು ಗೌರವಿಸುತ್ತಿದ್ದಾರೆ. ಈ ಎರಡು ಒಂದೆ. ಇವುಗಳಲ್ಲಿ ಬೇಧಭಾವವಿಲ್ಲ. ವೀರಶೈವ ಲಿಂಗಾಯತ ಧರ್ಮವು ಪ್ರಾಚೀನವಾದದ್ದು ಅದನ್ನು ಶ್ರದ್ಧೆನಿಷ್ಠೆಯಿಂದ ಪಾಲಿಸಬೇಕು. ಸಮಾಜದಲ್ಲಿ ದ್ವಂಧ್ವ ಸೃಷ್ಟಿ ಮಾಡುವವರಿಗೆ ಭಕ್ತರೇ ಸರಿಯಾದ ಉತ್ತರ ನೀಡಬೇಕು. ಇಂತಹ ಧರ್ಮ ಜಾಗೃತಿಯ ಕಾರ್ಯಕ್ರಮವನ್ನು ಆಯೋಜಿಸಿ ಮಕ್ಕಳಿಗೂ ಯೋಗ್ಯ ಸಂಸ್ಕಾರ ನೀಡಿ ನಮ್ಮ ಪರಂಪರೆಯನ್ನು ಮುಂದುವರೆಸುವಂತೆ ತಿಳಿಸಿದರು.

ಅಖಿಲಭಾರತ ವೀರಶೈವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಹಿರೇಮಠ ಹುಕ್ಕೇರಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಸಿದ್ಧಾಂತ ಶಿಖಾಮಣಿ ಗ್ರಂಥವು 18ಭಾಷೆಗಳಿಗೆ ಭಾಷಾಂತರಗೊಂಡು ಜಗತ್ತಿನಾಧ್ಯಂತ ಧರ್ಮ ಜಾಗೃತಿ ಮೂಢಿಸುತ್ತಿದೆ. ಇದನ್ನು ನಾವೆಲ್ಲ ಗೌರವಿಸಿ ಆಚರಣೆಗೆ ತರಬೇಕು. ಇದನ್ನು ವಿರೋಧಿಸುವವರನ್ನು ನಾವೆಲ್ಲ ಖಂಡಿಸೋಣ ಎಂದರು.

ಸಮಾರಂಭಕ್ಕೂ ಮುನ್ನ ನಗರ ಶ್ರೀ ಬನಶಂಕರಿ ದೇವಸ್ಥಾನದಿಂದ ಸಕಲ ವಾದ್ಯ ವೈಭವದೊಂದಿಗೆ, ಶ್ರೀ ಸಿದ್ಧಾಂತಶಿಖಾಮಣಿ ಗ್ರಂಥ ಹಾಗೂ ಸುಮಂಗಲಿಯರ ಪೂರ್ಣಕುಂಭದೊಂದಿಗೆ ಕಾಶಿ ಜಗದ್ಗುರುಗಳನ್ನು ಸ್ವಾಗತಿಸಲಾಯಿತು.

ವೇದಿಕೆಯ ಮೇಲೆ ನಗರದ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶ್ರೀ ಮುಪ್ಪಯ್ಯನ ಮಠದ ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು, ಮರಡಿ ಮಠದ ಡಾ.ಪವಾಡೇಶ್ವರ ಸ್ವಾಮಿಗಳು, ಬಾಗೋಜಿಕೊಪ್ಪದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಹುಬ್ಬಳ್ಳಿಯ ಶ್ರೀ ರಾಜಶೇಖರ ಶಿವಾ ಚಾರ್ಯ ಸ್ವಾಮಿಗಳು, ಕಬ್ಬೂರಿನ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಬಟಕೂರ್ಕಿಯ ಶ್ರೀ ಬಸವಲಿಂಗ ಸ್ವಾಮಿಗಳು ಹಾಗೂ ಅತಿಥಿ ಅಶೋಕ ಪೂಜಾರಿ, ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರಕಾಶ ಕಂಬಿ ಇದ್ದರು.

# ವಿಶ್ವ ಗುರು ಬಸವಣ್ಣನವರ ಜಯಂತಿ

**ಬೆಳಗಾವಿ ವಾರ್ತೆ ಹುಬ್ಬಳ್ಳಿ :** ಅಕ್ಷಯ್ ಕಾಲೋನಿ ಯ " ಮಹಾಶರಣೆ ಗಂಗಾಂಬಿಕಾ ಬಳಗ"ವು ಜಗನ್ಮಾತೆ ಅಕ್ಕಮಹಾದೇವಿ ಹಾಗೂ ವಿಶ್ವ ಗುರು ಬಸವಣ್ಣನವರ ಜಯಂತಿಯನ್ನು ಸಂಭ್ರಮ ದಿಂದ ಆಚರಿಸಿತು. ಉದಯೋನ್ಮುಖ ಸಂಗೀತ ಕಲಾವಿದೆ ಹಾಗೂ ಧಾರವಾಡ ದ ಕರ್ನಾಟಕ ಕಾಲೇಜಿನ ವಿದ್ಯಾರ್ಥಿನಿ ಕು. ಶಿವಾನಿ ಕವಟೆಕರ ಮುಖ್ಯ ಅತಿಥಿ ಯಾಗಿ ಆಗಮಿಸಿದ್ದರು. ಕಿರಣಾ ಘರಾಣಾ ಪರಂಪರೆಯ ಹಿಂದೂಸ್ತಾನಿ ಸಂಗೀತ ಕಲಾವಿದೆ ಶಿವಾನಿ ಅವರು ಪೂರಿಯಾ ಧನಾಶ್ರೀ ರಾಗ ದಿಂದ ಶಾಸ್ತ್ರೀಯ ಸಂಗೀತ ವನ್ನು ಆರಂಭಿಸಿ, ಅನಂತರದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭು, ಅಕ್ಕ ನ ವಚನಗಳನ್ನು ಸುಶ್ರಾವ್ಯ ವಾಗಿ, ರಾಗಬದ್ಧ ವಾಗಿ ಹಾಡಿ ಶೋತ್ರುಗಳನ್ನು ಮನರಂಜಿಸಿದರು.

ಅಧ್ಯಕ್ಷತೆಯನ್ನು ಅನುಭಾವಿ ಲೇಖಕಿ ಶಾಂತಾ ಕೆ. ಬಸವರಾಜ ವಹಿಸಿದ್ದರು. ದಾಕ್ಷಾಯಣಿ ಕೋಳಿವಾಡ ಅವರು ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಬಳಗದ ಸಂಚಾಲಕರಾದ ಡಾ. ಸ್ನೇಹಾ ಭೂಸಾನೂರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಶರಣರು ಸಂಗೀತಕ್ಕೆ ಕೊಟ್ಟ ಪ್ರಧಾನ್ಯತೆ ಯನ್ನು ವಿವರಿಸಿದರು. ಶಶಿಕಲಾ ಕೊಡೇಕಲ್ ವಂದಿಸಿದರು. ಗೀತಾ ಸಾಲಿಮಠ ನಿರೂಪಿಸಿದರು. ಆಶಾ ಕವಳಿ, ಗೀತಾ ತೆಂಗಿನ ಕಾಯಿ, ಸುಧಾ ಗಂಜಿ, ಶೈಲಾ ಹುಲಮನಿ, ಸುಶೀಲಮ್ಮ ಬಣಕಾರ, ಶೋಭಾ ದೇಸಾಯಿ, ಮಮತಾ ಶೆಟ್ಟರ, ಸರೋಜಾ ಮೇಟಿ, ಸುನೀತಾ ಹುಬ್ಳಿಕರ, ಬಸಮ್ಮ ಕೋಟಿ, ಸೀಮಾ, ಸುಮಾ, ಗೀತಾ,



ಶಾಂತಾ, ಗಂಗಾ,ಪಾರ್ವತಿ, ಅನುಪಮಾ, ಶಾರದಾ,ರತ್ನಾ, ರೇಖಾ,ವೀಣಾ,ಲಕ್ಷ್ಮಿ, ಸುಷ್ಮಾ, ಶಿಲ್ಪಾ, ಅಶ್ವಿನಿ,ಡಾ. ಪ್ರಕಾಶ ಮುನ್ನೊಳಿ, ಅಪ್ಪಾಸಾಬ ಸಿಂದಗಿ, ಶಶಿಧರ ನಾರಾ, ಡಾ. ಕುಬಸದ, ರವೀಂದ್ರ ಕವಟೇಕರ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ , ಸುಜಯ್ ಸುರೇಶ್ ಹೊರಕೇರಿ, ಸೋಹನ್ ಸುರೇಶ್ ಹೊರಕೇರಿ, ಸಹನಾ ಸುರೇಶ್ ಹೊರಕೇರಿ, ಸುಪ್ರಿಯಾ ಸುರೇಶ್ ಹೊರಕೇರಿ, ಮುಂತಾದವರು ಉಪಸ್ಥಿತರಿದ್ದರು. ವಚನ ಮಂಗಲದ ನಂತರ ಎಲ್ಲರೂ ಪ್ರಸಾದ ಸ್ವೀಕರಿಸಿದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI , KARNATAKA - 590001